ಸಂಪುಟ 01 । ಸಂಚಿಕೆ 132 । ಸೋಮವಾರ 30 ಮಾರ್ಚ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
# NAIJYA DESE

ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ, ಗದಗ, ವಿಜಯನಗರ, ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಜಸ್ಥಾನ ದಿನ

ರಾಜಸ್ಥಾನ ರಾಜ್ಯ ರಚನೆಯ ನೆನಪಿಗಾಗಿ ಮಾರ್ಚ್ 30 ರಂದು ರಾಜ್ಯಾದ್ಯಂತ ಆಚರಿಸಲಾಗುತ್ತದೆ. 1949 ರ ಈ ದಿನದಂದು, ಜೋಧಪುರ, ಜೈಪುರ, ಬಿಕಾನೇರ್ ಮತ್ತು ಜೈಸಲ್ಮೇರ್ ಎಂಬ ನಾಲ್ಕು ರಾಜ್ಯಗಳು ಸಂಯುಕ್ತ ರಾಜಸ್ಥಾನ ರಾಜ್ಯದೊಂದಿಗೆ ವಿಲೀನವಾದವು ಮತ್ತು ಈ ಪ್ರದೇಶವು ಗ್ರೇಟರ್ ರಾಜಸ್ಥಾನ ಎಂದು ಕರೆಯಲ್ಪಟ್ಟಿತು.

## ಸುಭಾಷಿತ

ವಿಧೇಯನಾಗಿ ಇರಲು ಕಲಿಯದವನು
ಉತ್ತಮ ನಾಯಕ ಆಗಲು ಸಾಧ್ಯವಿಲ್ಲ.

–ಅರಿಸ್ಟಾಟಲ್

## ಹಾರ್ಮುಜ್ ಜಲಸಂಧಿಯಲ್ಲಿ ದಾಟಿದ ಭಾರತದ ಮತ್ತೆರಡು ಎಲ್‌ಪಿಜಿ ಹಡಗುಗಳು

**ಟೆಹ್ರಾನ್: ಇರಾನ್– ಇಸ್ರೇಲ್– ಅಮೆರಿಕ ಯುದ್ಧದ ಮಧ್ಯೆಯೂ ಭಾರತಕ್ಕೆ ಮತ್ತೊಂದು ಶುಭಸುದ್ದಿ ಬಂದಿದೆ. ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ಭಾಗಶಃ ಅನುಮತಿ ನೀಡಿದ ನಂತರ ಭಾರತ ಧ್ವಜ ಹೊತ್ತ ಮತ್ತು ಎರಡು ಎಲ್‌ಪಿಜಿ (ದ್ರವೀಕೃತ ಪೆಟ್ರೋಲಿಯಂ ಅನಿಲ) ಹಡಗುಗಳು ಸುರಕ್ಷಿತವಾಗಿ ಭಾರತಕ್ಕೆ ಬಂದು ಸೇರಿವೆ. ನಿಗದಿಪಡಿಸಿದ ಮಾರ್ಗಗಳನ್ನು ಅನುಸರಿಸಿ ಹಡಗುಗಳು ಪ್ರಯಾಣವನ್ನು ಪೂರ್ಣಗೊಳಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.90,000 ಟನ್‌ಗಳಿಗಿಂತ ಹೆಚ್ಚು ಹೊತ್ತ ಎರಡು ಭಾರತ ಧ್ವಜವಿರುವ ಟ್ಯಾಂಕರ್‌ಗಳು ಹಾರ್ಮುಜ್ ಜಲಸಂಧಿಯನ್ನು ದಾಟಿವೆ.**

ವಿಶ್ವದ ಅತ್ಯಂತ ನಿರ್ಣಾಯಕ ತೈಲ ಸಾಗಣೆ ಚಾಕ್‌ಪಾಯಿಂಟ್‌ಗಳಲ್ಲಿ ಒಂದಾದ ಹಾರ್ಮುಜ್ ಬಗ್ಗೆ ಟೆಹ್ರಾನ್‌ನ ನಿಲುವನ್ನು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಅವರು ಸ್ಪಷ್ಟಪಡಿಸಿದ ಒಂದು ದಿನದ ನಂತರ ಈ ಬೆಳವಣಿಗೆ ಸಂಭವಿಸಿದೆ. ಹಡಗು ಟ್ರ್ಯಾಕಿಂಗ್ ದತ್ತಾಂಶದ ಪ್ರಕಾರ, ಭಾರತಕ್ಕೆ ತೆರಳುತ್ತಿದ್ದ ಎರಡು ಎಲ್‌ಪಿಜಿ (ಅಡುಗೆ ಅನಿಲ) ಟ್ಯಾಂಕರ್‌ಳಾದ ಬಿಡಬ್ಲ್ಯೂ



ಎಲ್ ಮತ್ತು ಬಿಡಬ್ಲ್ಯೂ ಟೈರ್, ಹಾರ್ಮುಜ್ ಜಲಸಂಧಿಯ ಮೂಲಕ ಸಾಗುತ್ತಿವೆ.

ಇರಾನ್ ವಿರುದ್ಧ ಅಮೆರಿಕ–ಇಸ್ರೇಲಿ ದಾಳಿಗಳಿಂದಾಗಿ ಈ ಪ್ರಮುಖ ಸಮುದ್ರ ಮಾರ್ಗವು ಅಪಾಯದಲ್ಲಿದೆ. ಆದರೂ ಇರಾನ್ ತನ್ನ ಅನುಮತಿಯೊಂದಿಗೆ ಮಿತ್ರ ರಾಷ್ಟ್ರಗಳ ಹಡಗುಗಳು ಅದರ ಮೂಲಕ ಹಾದುಹೋಗಬಹುದು ಎಂದು ಹೇಳಿದೆ. ಜಗ್‌ವಸಂತ್ ಮತ್ತು ಪೈನ್‌ಗ್ಯಾಸ್ ಎರಡೂ ಹಡಗುಗಳು ಟೆಹ್ರಾನ್ ಅನುಮೋದಿಸಿದ ಮಾರ್ಗಗಳಲ್ಲಿ ಇರಾನಿನ ಕರಾವಳಿಯನ್ನು ನಿಕಟವಾಗಿ ಪತ್ತೆಹಚ್ಚುವ ಮೂಲಕ ಜಲಸಂಧಿಯಲ್ಲಿ ಸಂಚರಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗುಜರಾತ್‌ನ ವಡಿನಾರ್ ಬಂದರಿನಲ್ಲಿ ಲಂಗರು ಹಾಕಿತು. 230 ಮೀಟರ್ ಉದ್ದದ ಈ ಹಡಗು 47,000 ಟನ್ ಎಲ್‌ಪಿಜಿಯನ್ನು ಸಾಗಿಸುತ್ತಿತ್ತು. ಅದರ ಸರಕನ್ನು ಹೆಚ್ಚಿನ ಸಾಗಣೆಗಾಗಿ ಮತ್ತೊಂದು ಹಡಗಿಗೆ ವರ್ಗಾಯಿಸಲಾಗಿದೆ. ಹಡಗಿನ 14 ಸದಸ್ಯರ ಸಿಬ್ಬಂದಿ ಆರೋಗ್ಯವಾಗಿದ್ದಾರೆ ಎಂದು ವಕ್ತಾರರು ದೃಢಪಡಿಸಿದ್ದಾರೆ.

ಭಾರತೀಯ ಪ್ರಾದೇಶಿಕ ಜಲಪ್ರದೇಶವನ್ನು ಪ್ರವೇಶಿಸಿತು. ಇಂಡಿಂ–ಯನ್ ಆಯಿಲ್ ಕಾರ್ಪೆ?ರೇಷನ್‌ನಿಂದ ಚಾರ್ಟರ್ ಮಾಡಲಾದ ಈ ಹಡಗು ಏಪ್ರಿಲ್ 2ರಂದು ಒಡಿಶಾದ ಧಮ್ರಾ ಬಂದರನ್ನು ತಲುಪುವ ನಿರೀಕ್ಷೆಯಿದೆ. ಎರಡೂ ಹಡಗುಗಳು ಇರಾನಿನ ಕರಾವಳಿಯನ್ನು ನಿಕಟವಾಗಿ ಪತ್ತೆಹಚ್ಚುವ ಮೂಲಕ ಇರಾನ್ ನಿಗದಿಪಡಿಸಿದ ಮಾರ್ಗಗಳಲ್ಲಿ ಸಂಚರಿಸಿವೆ. ಇರಾನ್ ಭಾಗಶಃ ದಿಗ್ಬಂಧನವನ್ನು ಕಾಯ್ದುಕೊಂಡಿದ್ದರೂ, ಭಾರತ ಸೇರಿದಂತೆ ತನಗೆ ಸ್ನೇಹಪರ ಎಂದು ಪರಿಗಣಿಸುವ ದೇಶಗಳಿಗೆ ಆಯ್ದ ಮಾರ್ಗವನ್ನು ಅನುಮತಿಸಿದೆ.


ಭಾರತೀಯ ಧ್ವಜ ಹೊಂದಿರುವ ಮತ್ತೊಂದು ಮೂರು ಎಲ್‌ಪಿಜಿ ಹಡಗುಗಳು ಜಗ್ ವಿಕ್ರಮ್, ಗ್ರೀನ್ ಆಶಾ ಮತ್ತು ಗ್ರೀನ್ ಸಾನ್ವಿ ಮಿನಾ ಸಕ್?ರ ಬಳಿ ಲಂಗರು ಹಾಕಿವೆ. ಇವುಗಳು ಜಲಸಂಧಿಯ

4ನೇ ಪುಟಕ್ಕೆ

## ಪಾಟೀಲ ಸಹೋದರರಿಗೆ ಶಾಸಕರಿಂದ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದ ದಿವಂಗತ ಸಂಗನಗೌಡ ಪಾಟೀಲ ಪ್ರತಿಷ್ಠಿತ ಮನೆತನದವರಾದ ಬಾಪುಗೌಡ ಸಂಗನಗೌಡ ಪಾಟೀಲ ಹಾಗೂ ಅಶೋಕಗೌಡ ಪಾಟೀಲ ಇವರನ್ನು ಕಲ್ಬುರ್ಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ ಹಾಗೂ ದೇವರ ಹಿಪ್ಪರಗಿ ಮತಕ್ಷೇತ್ರ ಶಾಸಕ ರಾಜುಗೌಡ ಪಾಟೀಲ ಅವರು ಸನ್ಮಾನಿಸಿ ಗೌರವಿಸಿದರು.**



ಶನಿವಾರ ಪಟ್ಟಣದ ಆರಾಧ್ಯ ದೈವ ಶ್ರೀ ಬಂಡಿ ಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನೂತನವಾಗಿ ನಿರ್ಮಿಸಿದ ರಥದ ಉದ್ಘಾಟನಾ ಸಮಾರಂಭದಲ್ಲಿ ಪಾಟೀಲ ಸಹೋದರರ ಧರ್ಮ ಸೇವೆಗಾಗಿ ಅವರನ್ನು ಉಭಯ ಶಾಸಕರು ಗೌರವಿಸಿದರು. ಈ ಸಂದರ್ಭದಲ್ಲಿ ಖಾಸ್ಗತೇಶ್ವರ ಮಠದ ಮುಖ್ಯಸ್ಥ ವೇ.ಮೂ.ಮುರಗೇಶ ವಿರಕ್ತಮಠ, ಗಣ್ಯರಾದ ಬಿ.ಎಸ್. ಪಾಟೀಲ ಯಾಳಗಿ, ಸಿದ್ದನಗೌಡ ಪಾಟೀಲ ನಾವದಗಿ,ಎಚ್.ಎಸ್.ಪಾಟೀಲ, ಕಾಶಿನಾಥ ಮುರಾಳ, ಮಡು ಸೌಕಾರ, ಶರಣಗೌಡ ಪಾಟೀಲ, ಸಿದ್ದನಗೌಡ ಪಾಟೀಲ, ಅಶೋಕಗೌಡ ಪಾಟೀಲ, ರಾಜುಗೌಡ ಪಾಟೀಲ,ಪರುಶುರಾಮ ತಂಗಡಗಿ ಮತ್ತಿತರರು ಇದ್ದರು.

## ಅಡುಗೆ ಅನಿಲದ ಆತಂಕ ಬೇಡ :ಸಚಿವ ಕೆ.ಎಚ್.ಮುನಿಯಪ್ಪ



❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಅಡುಗೆ ಅನಿಲದ ಅಭಾವದ ಬಗ್ಗೆ ಜನರು ಆತಂಕಕ್ಕೆ ಒಳಗಾಗಬಾರದು ಎಂದು ಮನವಿ ಮಾಡಿರುವ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಹೋಟೆಲ್‌ಗಳಿಗೆ ಶೇ.20 ರಷ್ಟು ಅಡುಗೆ ಅನಿಲ ಪೂರೈಸಲಾಗುತ್ತಿದೆ ಎಂದಿದ್ದಾರೆ.**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಸ್ಪತ್ರೆಗಳಿಗೆ ಶೇ.100 ರಷ್ಟು ಅಡುಗೆ ಅನಿಲದ ಸಿಲಿಂಡರ್‌ಗಳನ್ನು ಪೂರೈಸಲಾಗುತ್ತಿದೆ. ಗೃಹಬಳಕೆಗೆ ನಗರ ಪ್ರದೇಶದಲ್ಲಿ 25 ದಿನಗಳಿಗೆ ಒಂದರಂತೆ ಸಿಲಿಂಡರ್ ನೀಡಲಾಗುವುದು. ಗ್ರಾಮೀಣ ಭಾಗದಲ್ಲಿ 45 ದಿನಗಳಿಗೊಂದು ಸಿಲಿಂಡರ್ ಸರಬರಾಜು ಮಾಡಲಾಗುವುದು ಎಂದು ಹೇಳಿದರು. ವಾಣಿಜ್ಯ ಬಳಕೆಯ ಅಡುಗೆ ಅನಿಲದ ಸಮಸ್ಯೆ ಇದ್ದು, ಅದನ್ನು ಪರಿಹರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಸಭೆ ಮುಗಿಸಲಾಗಿದೆ.

ಜೊತೆಗೆ ಕೇಂದ್ರ ಸಚಿವರೊಂದಿಗೂ ಸಭೆ ಮಾಡಿ ಪರಿಸ್ಥಿತಿ ನಿಭಾಯಿಸುವ ಬಗ್ಗೆ ಚರ್ಚೆಯಾಗಿದೆ ಎಂದರು. ಮಾ.31 ರಂದು ಮತ್ತೊಂದು ಸುತ್ತಿನ ಸಭೆ ನಡೆಯಲಿದ್ದು, ಅಂದು ವಾಣಿಜ್ಯ ಸಿಲಿಂಡರ್‌ಗಳ ಬಿಕ್ಕಟ್ಟಿನ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳ ಮಾಡಿರುವ ಬಗ್ಗೆಯೂ ಚರ್ಚೆ ನಡೆಸಲಾಗುವುದು ಎಂದು ಅವರು ತಿಳಿಸಿದರು.

## ಯುಗಾದಿ?ರಂಜಾನ್ ಹಬ್ಬಗಳ ನಿಮಿತ್ತ ಸೌಹಾರ್ದ ಸಂಗಮ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಮಿಲಾಪ್ ಶಾದಿ ಮಹಲ್ ನಲ್ಲಿ ದಿನಾಂಕ 03–04–2026 ರಂದು ಸಂಜೆ 7.00 ಗಂಟೆಗೆ ಸದ್ಭಾವನಾ ವೇದಿಕೆ ಸಿಂಧನೂರು ಜಮಾಅತೆ ಇಸ್ಲಾಮೀ ಹಿಂದ್ ಸಿಂಧನೂರು ಹಾಗೂ ಭಾವೈಕ್ಯ ಶಾಂತಿ ಸಂದೇಶ ಸಂಸ್ಥೆ ಸಿಂಧನೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಯುಗಾದಿ ಹಾಗೂ ರಂಜಾನ್ ಹಬ್ಬಗಳ ಸಂಭ್ರಮದ ನಿಮಿತ್ತ ಸಹಭಾಗಿತ್ವ ಸೌಹಾರ್ದ ಸಂಗಮ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.**

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಮಹಾಂತ ಸ್ವಾಮೀಜಿಗಳು (ಸಾಲಿಮಠ), ಕಲ್ಯಾಣ ಆಶ್ರಮ ಮಠಾಧೀಶರು ಆಗಮಿಸುತ್ತಿದ್ದಾರೆ ಹಾಗೂ




ಮಹಮ್ಮದ್ ಕುಂಞ,ವ್ಯವಸ್ಥಾಪಕರು ಶಾಂತಿ ಪ್ರಕಾಶನ ಮಂಗಳೂರು ಆಗಮಿಸಲಿದ್ದಾರೆ. ಹಾಗೂ ಶ್ರೀಮತಿ ಮಧುಮತಿ ದೇಶಪಾಂಡೆ, ನಿವೃತ್ತ ಉಪನ್ಯಾಸಕರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ|| ಚನ್ನನ ಗೌಡ ಪೊಲೀಸ್ ಪಾಟೀಲ್ ಅಧ್ಯಕ್ಷರು ಸದ್ಭಾವನಾ ವೇದಿಕೆ ಸಿಂಧನೂರು ಹಾಗೂ ಪ್ರಸಿದ್ಧ ನೇತ್ರ ತಜ್ಞರು ಸಿಂಧನೂರು ಮೊಹಮ್ಮದ್ ಹುಸೇನ್ ಅಧ್ಯಕ್ಷರು ಜಮಾಅತೆ ಇಸ್ಲಾಮೀ ಹಿಂದ್ ಸಿಂಧನೂರು ಶ್ರೀ ಪಂಪಯ್ಯ ಸ್ವಾಮಿ ಹಿರೇಮಠ ಅಧ್ಯಕ್ಷರು ಭಾವೈಕ್ಯ ಶಾಂತಿ ಸಂದೇಶ ಸಿಂಧನೂರು ಸೇ–ರಿದಂತೆ ಹಲವರು ಉಪಸ್ಥಿತರಿರುವರು. ನಗರದ ಸರ್ವ ಧರ್ಮದ ಶಾಂತಿ–ಸೌಹಾರ್ದತೆಗೆ ಹಾರೈಸುವ ಈ ಕಾರ್ಯಕ್ರಮಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಆಯೋಜಕರು ವಿನಂತಿಸಿದ್ದಾರೆ.

## ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರ :ಡಾ.ಪ್ರಭಾ ಮಲ್ಲಿಕಾರ್ಜುನ ಮತಯಾಚನೆ

❑ ನೈಜ್ಯ ದೆಸೆ ನ್ಯೂಸ್

**ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಅಂಗವಾಗಿ ಡಾ. ಪ್ರಭಾ ಮಲ್ಲಿಕಾರ್ಜುನ ಅವರು ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ ಪರವಾಗಿ ವಿವಿಧ ಹಳ್ಳಿಗಳಲ್ಲಿ ವ್ಯಾಪಕವಾಗಿ ಪ್ರಚಾರ ನಡೆಸಿದರು.** ಶಿರಮಗೊಂಡನಹಳ್ಳಿ, ಹೊಸಬೆಳವನೂರು ತಾಂಡ, ಬೆಳವನೂರು,ಉಜ್ಜಿನಿಪುರ,ಚಂದ್ರೇನಹಳ್ಳಿಗಳಲ್ಲಿ ಕಾಲ್ನಡಿಗೆ ಮೂಲಕ ಗ್ರಾಮಸ್ಥರನ್ನು ಭೇಟಿ ಮಾಡಿ ಮಾತನಾಡಿದ ಅವರು, ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕುವಂತೆ ಮನವಿ ಮಾಡಿದರು. ಪ್ರತಿಯೊಬ್ಬರೂ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸ್ವಾವಲಂಬಿಯಾಗಬೇಕು. ಅಂತಹ ಆಡಳಿತವನ್ನು ಕಾಂಗ್ರೆಸ್ ಸರ್ಕಾರ



ನೀಡಿದೆ. ಗ್ಯಾರಂಟಿ ಯೋಜನೆಗಳು ಜನರ ಮನೆಬಾಗಿಲಿಗೆ ತಲುಪಿವೆ. ನಮ್ಮ ಅಭ್ಯರ್ಥಿಯ ಕ್ರಮಸಂಖ್ಯೆ – 3ಕ್ಕೆ ಮತಹಾಕಿ ಅಭಿವೃದ್ಧಿಗೆ ಮತ್ತಷ್ಟು ಅವಕಾಶ ನೀಡಿ ಎಂದರು. ಕಾಂಗ್ರೆಸ್ ಸರ್ಕಾರ ಶಿಕ್ಷಣ, ಕಾನೂನು ಸುವ್ಯವಸ್ಥೆ ಜೊತೆಗೆ ನೆಮ್ಮದಿಯ ಬದುಕನ್ನು ಒದಗಿಸಿದೆ. ನಮ್ಮ ಆಡಳಿತ ಸದಾ ಸಾಮಾಜಿಕ ನ್ಯಾಯದ ಪರವಾಗಿದೆ.

ಈ ವೇಳೆ ಶಾಮನೂರು ಶಿವಶಂಕರಪ್ಪಾ–ಜಿಯವರ ಸೇವೆಯನ್ನು ಸ್ಮರಿಸಿದ ಅವರು ಪಕ್ಷಾತೀತವಾಗಿಹಾಗೂಜಾತ್ಯಾತೀತವಾಗಿ ಎಲ್ಲ ಸಮಾಜಗಳನ್ನು ಸಮಾನವಾಗಿ ಕಂಡು ಜನಸೇವೆ ಮಾಡಿದ ಮಹನೀಯರು ಎಂದು ಹೇಳಿದರು. ಅವರ ಹಾದಿಯಲ್ಲೇ ಸಮರ್ಥ್ ಶಾಮನೂರು ಮುನ್ನಡೆಯುತ್ತಿದ್ದಾರೆ ಎಲ್ಲರೂ ಅವರನ್ನು ಬೆಂಬಲಿಸಿ ಮತ ನೀಡಿ ಎಂದು ಮನವಿ ಮಾಡಿದರು. ಇದೇ ವೇಳೆ ಬೆಳವನೂರು ಗ್ರಾಮದಲ್ಲಿ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವದಲ್ಲಿ ಭಾಗವಹಿಸಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಈ ವೇಳೆ ಪಕ್ಷದ ಹಿರಿಯಮುಖಂಡರು,ಕಾಂರ್ಯಕರ್ತರು, ಅಭಿಮಾನಿಗಳು ಇದ್ದರು.

## ಸಿಸಿ ಕ್ಯಾಮರಗಳಿಂದ ತಾಲೂಕಿನಲ್ಲಿ ಅಪರಾಧ ನಿಯಂತ್ರಣ, ಟ್ರಾಫಿಕ್ ನಿರ್ವಹಣೆ ಹಾಗೂ ಸಾರ್ವಜನಿಕ ಸುರಕ್ಷತೆಗೆ ಮಹತ್ವದ ಪಾತ್ರ ಶಾಸಕ ಹಂಪನಗೌಡ ಬಾದರ್ಲಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ರಾಯಚೂರು ಜಿಲ್ಲಾ ಪೊಲೀಸ್, ಸಿಂಧನೂರು ಉಪ ವಿಭಾಗ, ಸಿಂಧನೂರು ನಗರ ಪೊಲೀಸ್ ಠಾಣೆ – ಕೆಕೆಆರ್‌ಡಿಬಿ ಮ್ಯಾಕ್ರೋ ಯೋಜನೆಯ 2024–25 ನೇ ಸಾಲಿನ ವಿಧಾನಸಭಾ ಶಾಸಕರ ವಾರ್ಡಗಳಲ್ಲಿ ಸಿಸಿ ಕ್ಯಾಮರಾ ಹಾಗೂ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಅನುದಾನದಲ್ಲಿ ಸಿಂಧನೂರು ನಗರ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಮತ್ತು ವಾರ್ಡ ನಂ 01 ರಿಂದ 31 ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಅಡಿಯಲ್ಲಿ 12 ಪೊಲೀಸ್ ವಸತಿ ಗ್ರಹಗಳನ್ನು ಎಸ್ ಪಿ ಅರುಣಾಂಶ ಗಿರಿ ಅವರು ಉದ್ಘಾಟಿಸಿದರು.**

ಉದ್ಘಾಟನೆಯ ನಂತರ ಮಾತನಾಡಿದ ಎಸ್.ಪಿ ಅರುಣಾಂಶು ಗಿರಿ ಅವರು, ಪೊಲೀಸ್ ಸಿಬ್ಬಂದಿ ಸಮಾಜದ ಭದ್ರತೆಗೆ ತಮ್ಮ ಕುಟುಂಬದಿಂದ ದೂರವಿದ್ದು ಸೇವೆ ಸಲ್ಲಿಸುತ್ತಾರೆ. ಅವರಿಗೆ ಉತ್ತಮ ವಸತಿ ಸೌಲಭ್ಯ ಒದಗಿಸುವುದು ಸರ್ಕಾರ ಹಾಗೂ ಜನಪ್ರತಿನಿಧಿಗಳ ಮಹತ್ವದ ಜವಾಬ್ದಾರಿಯಾಗಿದೆ. ಸುಸಜ್ಜಿತ ವಸತಿ ವ್ಯವಸ್ಥೆಯಿಂದ ಪೊಲೀಸ್ ಸಿಬ್ಬಂದಿಯ ಮನೋಬಲ




ಹೆಚ್ಚಾಗಿ ಸಾರ್ವಜನಿಕ ಸೇವೆ ಇನ್ನಷ್ಟು ಪರಿಣಾಮಕಾರಿಯಾಗಿ ನಡೆಯಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಶಾಸಕ ಹಂಪನಗೌಡ ಬಾದರ್ಲಿ ಮಾತನಾಡಿ, ನಗರದ ಸಮಗ್ರ ಅಭಿವೃದ್ಧಿಗೆ ವಿವಿಧ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಕೆ.ಕೆ.ಆರ್.ಡಿ.ಬಿ ಮ್ಯಾಕ್ರೋ ಯೋಜನೆಯಡಿ ?1 ಕೋಟಿ 35 ಲಕ್ಷ ವೆಚ್ಚದಲ್ಲಿ ನಗರದ ಪ್ರಮುಖ ರಸ್ತೆ, ವೃತ್ತಗಳು ಹಾಗೂ 31 ವಾರ್ಡ್‌ಗಳಲ್ಲಿ 100 ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಅಪರಾಧ ನಿಯಂತ್ರಣ, ಟ್ರಾಫಿಕ್ ನಿರ್ವಹಣೆ ಹಾಗೂ ಸಾರ್ವಜನಿಕ ಸುರಕ್ಷತೆಗೆ ಈ ವ್ಯವಸ್ಥೆ ಮಹತ್ವದ ಪಾತ್ರ ವಹಿಸಲಿದೆ ಎಂದು ಹೇಳಿದರು. ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಮಾತನಾಡಿ,

ಪೊಲೀಸ್ ಇಲಾಖೆ ಬಲಿಷ್ಠವಾಗಿದ್ದರೆ ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಸಾಧ್ಯವಾಗುತ್ತದೆ. ಪೊಲೀಸರ ಕಲ್ಯಾಣಕ್ಕಾಗಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು. ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎಂ. ದೊಡ್ಡ ಬಸವರಾಜ ಅವರು ಮಾತನಾಡಿ, ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಸಹಕಾರ ಮನೋಭಾವದಿಂದ ನಡೆದುಕೊಂಡರೆ ಅಪರಾಧ ನಿಯಂತ್ರಣ ಸುಲಭವಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಡಿವೈಎಸ್‌ಪಿ ಚಂದ್ರಶೇಖರ, ವೈ. ನರೇಂದ್ರನಾಥ, ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ, ಜನಪ್ರತಿನಿಧಿಗಳು ಹಾಗೂ ಸ್ಥಳೀಯ ಗಣ್ಯರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಕರ್ಮ

ಕರ್ಮವೇ ಜೀವನದ ದಾರಿ,
ಮನುಜನ ನಡೆಗೆ ಅದೇ ಸಾಕ್ಷಿ.
ಬಿತ್ತಿದ ಬೀಜವೇ ಬೆಳೆವಾಗುತ್ತದೆ,
ಮಾಡಿದ ಕೆಲಸವೇ ಫಲ ಕೊಡುತ್ತದೆ.

ಒಳ್ಳೆಯ ಮನದ ಒಂದು ಕೆಲಸ,
ನೂರಾರು ಹೃದಯಗಳಲ್ಲಿ ಬೆಳಕು.
ಕೆಟ್ಟ ಕರ್ಮದ ನೆರಳು ಬಂದರೆ,
ಶಾಂತಿಯ ಹಾದಿ ದೂರವಾಗುತ್ತದೆ.

ಕೈಯಲ್ಲಿ ಇರುವದು ಕರ್ಮ ಮಾತ್ರ,
ಫಲದ ಮೇಲೆ ನಮಗಿಲ್ಲ ಅಧಿಕಾರ.
ನಿಸ್ವಾರ್ಥವಾಗಿ ನಡೆದು ಹೋದರೆ,
ಜೀವನವೇ ಆಗುತ್ತದೆ ಸುಂದರ ಸಾರ.

ನಮ್ಮ ಮಾತು, ನಮ್ಮ ನಡೆ,
ನಾಳೆಯ ಭಾಗ್ಯವನ್ನು ಬರೆಯುವ ಅಕ್ಷರ.
ಒಳ್ಳೆಯ ಕರ್ಮದ ಬೆಳಕಿನಲ್ಲಿ,
ಮಾನವ ಜೀವನವೇ ಆಗಲಿ ಅಮರ.

**ರವಿಕುಮಾರ್**

# ಇಂದು ಶ್ರೀ ರಾಮನವಮಿ ಉತ್ಸವ, ಭವ್ಯ ಶೋಭಾಯಾತ್ರೆ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಪಟ್ಟಣದ ಶ್ರೀ ರಾಮ ನವಮಿ ಉತ್ಸವ ಸಮಿತಿ(ರಿ) ವತಿಯಿಂದ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರರ ಜನ್ಮದಿನದ ಪ್ರಯುಕ್ತವಾಗಿ ಆಯೋಜಿಸಿದ ಎರಡನೇ ವರ್ಷದ ಶ್ರೀ ರಾಮನವಮಿ ಉತ್ಸವ ಹಾಗೂ ಭವ್ಯ ಶೋಭಾಯಾತ್ರೆ ಇಂದು (ಮಾ.30) ಅದ್ದೂರಿಯಾಗಿ ನಡೆಯಲಿದೆ. ಉತ್ಸವದ ಅಂಗವಾಗಿ ಇಂದು ಸಂಜೆ 4–00 ಘಂಟೆಗೆ ಶ್ರೀ ಮಹಾರಾಣಾ ಪ್ರತಾಪ ಸಿಂಹಜೀ ವೃತ್ತದಲ್ಲಿ ನಡೆಯಲಿರುವ ಬಹಿರಂಗ ಸಭೆಯ ಪಾವನ ಸಾನಿಧ್ಯವನ್ನು ಖಾಸ್ಗತೇಶ್ವರ ಮಠದ ಪೂಜ್ಯ ಶ್ರೀ ಸಿದ್ದಲಿಂಗ ದೇವರು, ಗುಂಡಕನಾಳ ಬ್ರಹನ್ಮಠದ ಶ್ರೀ ಷ.ಬ್ರ.**



**ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕೆಸರಟ್ಟಿ ಶಂಕರಲಿಂಗ ಮಠದ ಪೂಜ್ಯ ಶ್ರೀ ಸೋಮಲಿಂಗ ಮಹಾಸ್ವಾಮಿಗಳು ಹಾಗೂ ವೇದ ಮೂರ್ತಿ ವೆಂಕಟೇಶಾಚಾರ್ಯ ಗ್ರಾಮಪುರೋಹಿತ ಅವರು ವಹಿಸುವರು. ವಿಜಯಪುರ ನಗರ ಶಾಸಕ ಬಸನಗೌಡ ಆರ್.ಪಾಟೀಲ (ಯತ್ನಾಳ) ಸಮಾರಂಭವನ್ನು ಉದ್ಘಾಟಿಸುವರು. ಪುರಸಭೆ ಮಾಜಿ ಅಧ್ಯಕ್ಷ ದಶರಥಸಿಂಗ್ ಎನ್.ಮನಗೂಳಿ ಅಧ್ಯಕ್ಷತೆ ವಹಿಸುವರು. ವಿಜಯಪುರ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಆರ್ ಎಸ್ ಪಾಟೀಲ(ಕೂಚಬಾಳ) ಮುಖ್ಯ ಅತಿಥಿಗಳಾಗಿ ಆಗಮಿಸುವರು.

ವೇದಿಕೆ ಕಾರ್ಯಕ್ರಮದ ನಂತರ ಭವ್ಯ ಶೋಭಾ ಯಾತ್ರೆ ಪಟ್ಟಣದ ಶ್ರೀ ಮಹಾರಾಣಾ ಪ್ರತಾಪ್ ಸಿಂಹಜೀ ವೃತದಿಂದ ಆರಂಭವಾಗಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜ ವೃತ್ತ, ಕತ್ರಿ ಬಜಾರ್, ಶ್ರೀ ಅಂಬಾಭವಾನಿ ದೇವಸ್ಥಾನ ಮಾರ್ಗವಾಗಿ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಶ್ರೀ ಬಸವೇಶ್ವರ ವೃತ್ತದಲ್ಲಿ ಸಂಪನ್ನ ವಾಗುವುದು. ಹಿಂದೂ ಸಮಾಜದ ಧರ್ಮ ಜಾಗೃತಿ ಗಾಗಿ ನಡೆಯುವ ಸದರಿ ಕಾರ್ಯಕ್ರಮಗಳಲ್ಲಿ ಅಪಾರ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಶ್ರೀ ರಾಮನವಮಿ ಉತ್ಸವ ಸಮಿತಿಯ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಪ್ರಕಟಣೆ ಮೂಲಕ ವಿನಂತಿಸಿಕೊಂಡಿದ್ದಾರೆ.

# ಸಗರಪ್ಪ ವಿಶ್ವಕರ್ಮ ಎಎಸ್ಐ ಬಡ್ತಿ, ಗ್ರಾಮಸ್ಥರಿಂದ ಗೌರವಾರ್ಪಣೆ

**ನೈಜ್ಯ ದೆಸೆ ನ್ಯೂಸ್**

ಹಾಲಾಪೂರ: ಗ್ರಾಮದ ಸಗರಪ್ಪ ವಿಶ್ವಕರ್ಮ ರವರು ಪೊಲೀಸ್ ಇಲಾಖೆಯಲ್ಲಿ ನೇಮಕಗೊಂಡು, ಸುದೀರ್ಘವಾಗಿ ರಾಯಚೂರಿನಲ್ಲಿ 26 ವರ್ಷ ಪೊಲೀಸ್, ಹೆಡ್ ಕಾನ್ಸ್ಟೇಬಲ್ ಆಗಿ ಸೇವೆ ಸಲ್ಲಿಸಿ, ನಂತರ ಚಿಕ್ಕಬಳ್ಳಾಪುರಕ್ಕೆ ವರ್ಗಾವಣೆಗೊಂಡು ಅಲ್ಲಿ ಸೇವೆ ಸಲ್ಲಿಸಿದ ನಂತರ ಎಎಸ್ಐ ವೈರ್ಲೆಸ್ ಆಗಿ ಬಡ್ತಿ ಪಡೆದು ಪುನಹ ರಾಯಚೂರಿಗೆ ವರ್ಗಾವಣೆಯಾಗಿದ್ದಕ್ಕೆ ಗ್ರಾಮಸ್ಥರು, ಸ್ನೇಹ ಬಳಗದವರು ಗೌರವ ಸನ್ಮಾನ ಸಲ್ಲಿಸಿ ಅಭಿನಂದಿಸಿದರು. ನಂತರ




ರಂಗಭೂಮಿ ಕಲಾವಿದರಾದ ಮಾನಯ್ಯ ವಿಶ್ವಕರ್ಮ ಮಾತನಾಡಿ ಸಗರಪ್ಪ ವಿಶ್ವಕರ್ಮ ರವರು ಕುಟುಂಬವು ಬಹಳಷ್ಟು ದೈವಭಕ್ತಿ, ಸಂಪ್ರದಾಯಸ್ಥ ಕುಟುಂಬ ಅವರ ತಂದೆ ಬಹಳಷ್ಟು ಕಾಯಕಯೋಗಿಗಳು, ಹೀಗಾಗಿ ಅವರ ಶ್ರಮದ ಫಲವೇ ಇಂದು ಮಗನಿಗೆ ಅತ್ಯುತ್ತಮವಾದ ಹುದ್ದೆಯನ್ನು ಹೊಂದಿದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಡಾ. ಆರ್ ಬಿ ಹಿರೇಮಠ, ಶಂಕರಗೌಡ ಪೊ.ಪಾ, ಬೋಸರಾಜು, ಶಂಕರಗೌಡ ಮಾ.ಪಾ, ಗಂಗಾಧರ ಮರಾಠ, ಮಹಾದೇವ ವಿಶ್ವಕರ್ಮ, ವೆಂಕೋಬ ಬಿ, ಮೌನೇಶ ಬಡಿಗೇರ, ರಂಗಪ್ಪ ಕಂಪ್ಯೂಟರ, ಯಂಕಪ್ಪ ನಾಯಕ, ಮೌನೇಶ ಎಮ್, ಗಂಗಾಧರ ಎಸ್, ಸುನಿಲ ಹಾಗೂ ಇನ್ನಿತರ ಇದ್ದರು.

# ಪಶ್ಚಿಮ ಏಷ್ಯಾ ಬಿಕ್ಕಟ್ಟು ಸವಾಲು

**ನೈಜ್ಯ ದೆಸೆ ನ್ಯೂಸ್**


**ಪಶ್ಚಿಮ ಏಷ್ಯಾ ಬಿಕ್ಕಟ್ಟು ನಿಸ್ಸಂದೇಹವಾಗಿ ಸವಾಲಿನ ಸಮಯ. ಇದರಿಂದ ಜಾಗತಿಕ ಇಂಧನ ಪೂರೈಕೆಯ ಮೇಲೆ ಪರಿಣಾಮ ಬೀರಿದೆ. ಇಂತಹ ಸಮಯದಲ್ಲಿ, ಪರಿಸ್ಥಿತಿಗಳನ್ನು ರಾಜಕೀಯಗೊಳಿಸಬಾರದು. ಜೊತೆಗೆ ವದಂತಿಗಳಿಗೆ ಜನರು ಕಿವಿಗೊಡಬಾರದು ದೇಶದ ನಾಗರಿಕರು ಒಗ್ಗಟ್ಟಿನಿಂದ ಇರಬೇಕು–ಎಂದು ಪ್ರಧಾನಿ ನರೇಂದ್ರ ಮೋದಿ ಇಂದಿಲ್ಲಿ ಮನವಿ ಮಾಡಿದ್ದಾರೆ.**



ವದಂತಿಗಳ ಹರಡುವಿಕೆಯ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿರುವ ಅವರು, ತಪ್ಪು ಮಾಹಿತಿ ಪ್ರಸಾರ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹಾನಿ ಮಾಡುತ್ತದೆ. ಹೀಗಾಗಿ ಸರ್ಕಾರದ ಅಧಿಕೃತ ಸಂಪರ್ಕ ಮಾತ್ರ ಜನರು ನಂಬಬೇಕು ಎಂದು ಹೇಳಿದ್ದಾರೆ. ಮಾಸಿಕ ರೇಡಿಯೋ ಕಾರ್ಯಕ್ರಮ 'ಮನ್ ಕಿ ಬಾತ್' ನ 132 ನೇ ಸಂಚಿಕೆಯನ್ನುದ್ದೇಶಿಸಿ ಮಾತನಾಡಿದ ಅವರು ನಿಸ್ಸಂದೇಹವಾಗಿಯೂ ಸವಾಲಿನ ಸಮಯ.ನಾಗರಿಕರು ಒಗ್ಗಟ್ಟಿನಿಂದ ಇದ್ದು ಸವಾಲನ್ನು ಜಯಿಸಬೇಕು ಎಂದು ಮತ್ತೊಮ್ಮೆ ಮನವಿ ಮಾಡಿದ ಅವರು ಈ ವಿಷಯದ ಬಗ್ಗೆ ರಾಜಕೀಯ ಮಾಡುವವರು ದೂರವಿರಬೇಕು ಎಂದಿದ್ದಾರೆ. ಭಾರತದ ಇಂಧನ ಅಗತ್ಯಗಳನ್ನು ಪೂರೈಸುವಲ್ಲಿ ಮಧ್ಯಪ್ರಾಚ್ಯ ನಿರ್ಣಾಯಕ ಪಾತ್ರ ವಹಿಸುತ್ತದೆ "ಯುದ್ಧ ನಡೆಯುತ್ತಿರುವ ಪ್ರದೇಶ ಇಂಧನ ಅಗತ್ಯಗಳ ಪ್ರಮುಖ ಕೇಂದ್ರವಾಗಿದೆ. ಇದರಿಂದಾಗಿ ಪೆಟ್ರೋಲ್ ಮತ್ತು ಡೀಸೆಲ್ ಬಿಕ್ಕಟ್ಟು ವಿಶ್ವಾದ್ಯಂತ ಹೆಚ್ಚಿದೆ. ಜಾಗತಿಕ ಸಂಬಂಧಗಳು, ವಿವಿಧ ದೇಶಗಳಿಂದ ಬಂದ ನೆರವು ಮತ್ತು ಕಳೆದ ದಶಕದಲ್ಲಿ ಅದು ನಿರ್ಮಿಸಿರುವ ಸಾಮರ್ಥ್ಯಗಳಿಂದಾಗಿ ಭಾರತ ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದೆ ಎಂದಿದ್ದಾರೆ. ದೇಶದ 140 ಕೋಟಿ ನಾಗರಿಕರ ಹಿತಾಸಕ್ತಿಗಳಿಗೆ ಸಂಬಂಧಿಸಿದೆ. ಇದರಲ್ಲಿ ಸ್ವಾರ್ಥ ರಾಜಕೀಯಕ್ಕೆ ಅವಕಾಶವಿಲ್ಲ. ವದಂತಿಗಳನ್ನು ಹರಡುವವರು ದೇಶಕ್ಕೆ ದೊಡ್ಡ ಹಾನಿಯನ್ನುಂಟುಮಾಡುತ್ತಿದ್ದಾರೆ, ಎಲ್ಲರೂ ಜಾಗರೂಕರಾಗಿರಿ ಮತ್ತು ತಪ್ಪು ಮಾಹಿತಿಯಿಂದ ದಾರಿ ತಪ್ಪಬೇಡಿ ಎಂದು ಮನವಿ ಮಾಡಿದ್ದಾರೆ.

1 ಕೋಟಿ ಭಾರತೀಯರ ರಕ್ಷಣೆಗೆ ಧನ್ಯವಾದ : ಪಶ್ಚಿಮ ಏಷ್ಯಾ ಸಂಘರ್ಷದಲ್ಲಿ ನಡೆಯುತ್ತಿರುವ ಸಂಘರ್ಷದ ಸಮಯ ಜಗತ್ತಿನಲ್ಲಿ ಕೋವಿಡ್ ಸೋಂಕಿನ ಸಂದರ್ಭ ನೆನಪು ಮಾಡಿದೆ, ಇಂತಹ ಸಂಕಷ್ಟದ ಸಮಯದಲ್ಲಿ ಗಲ್ಫ್ ರಾಷ್ಟ್ರಗಳಲ್ಲಿ ಒಂದು ಕೋಟಿಗೂ ಅಧಿಕ ಭಾರತೀಯರನ್ನು ಬೆಂಬಲಿಸಿದ ಆ ದೇಶಗಳ ಮುಖ್ಯಸ್ಥರಿಗೆ ಧನ್ಯವಾದ ಹೇಳುವುದಾಗಿ ತಿಳಿಸಿದ್ದಾರೆ.

# "ನಲ್ ಜಲ್ ಮಿತ್ರ' ಮಹಿಳೆಯರಿಗೆ ಬಹು ಕೌಶಲ್ಯ ತರಬೇತಿ – ಪಂಪನಗೌಡ ಪಾಟೀಲ್




**ನೈಜ್ಯ ದೆಸೆ ನ್ಯೂಸ್**

**ಲಿಂಗಸಗೂರು: ಮಹಿಳೆಯರನ್ನು ನೀರು ಸರಬರಾಜು ಮತ್ತು ನಿರ್ವಹಣೆಯಲ್ಲಿ ಸಕ್ರಿಯವಾಗಿ ತೊಡಗಿಸುವ ಉದ್ದೇಶದಿಂದ 'ನಲ್ ಜಲ್ ಮಿತ್ರ' ಕಾರ್ಯಕ್ರಮದಡಿ 49 ಮಂದಿ ಮಹಿಳೆಯರಿಗೆ ಬಹು ಕೌಶಲ್ಯ ತರಬೇತಿ ನೀಡಲಾಗಿದೆ ಎಂದು ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕ ಪಂಪನಗೌಡ ಪಾಟೀಲ್ ತಿಳಿಸಿದ್ದಾರೆ.**

ಅವರಿಂದು ಪುರಸಭೆ ವ್ಯಾಪ್ತಿಯ ಕಸಬಾ ಲಿಂಗಸಗೂರು ಸರಕಾರಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಪ್ರತಿ ಗ್ರಾಮ ಪಂಚಾಯಿತಿಯಿಂದ ಇಬ್ಬರು ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಿ, 15ನೇ ಹಣಕಾಸು ಆಯೋಗ ಹಾಗೂ ಇತರೆ ಅನುದಾನಗಳ ಮೂಲಕ ಈ ತರಬೇತಿಯನ್ನು ನೀಡಲಾಗಿದೆ ಹಾಗೂ ಲಿಂಗಸಗೂರು ಮತ್ತು ಮಸ್ಕಿ ತಾಲೂಕಿನ ಮೊದಲ ಬ್ಯಾಚ್‌ಗಳಲ್ಲಿ ತರಬೇತಿ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ತಿಳಿಸಿದರು.

ಏಪ್ರಿಲ್ 1ರಿಂದ 23 ದಿನಗಳ ಕಾಲ ಗ್ರಾಮ ಪಂಚಾಯಿತಿಗಳಲ್ಲೇ 49 ಅಭ್ಯರ್ಥಿಗಳಿಗೆ ದ್ವಿತೀಯ ಹಂತದ 'ಆನ್ ಜಾಬ್ ಟ್ರೈನಿಂಗ್ ಆರಂಭವಾಗಲಿದೆ. ಪೈಪ್‌ಗಳ ಮೂಲಕ ನೀರು ಸರಬರಾಜಿನ ನಿರಂತರ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಗ್ರಾಮ ಪಂಚಾಯಿತಿಗಳೇ ಈ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಕಾರ್ಯಗತಗೊಳಿಸುವಂತೆ ಯೋಜನೆ ರೂಪಿಸಲಾಗಿದೆ ಎಂದು ವಿವರಿಸಿದರು.

ನಂತರ ಜಿಲ್ಲಾ ಸಹಾಯಕ ನಿರ್ದೇಶಕ ರಾಜಶೇಖರ ಪಾಟೀಲ್ ಮಾತನಾಡಿ, ಈ ತರಬೇತಿಯಿಂದ ಮಹಿಳೆಯರು ತಮ್ಮ ಗ್ರಾಮಗಳಲ್ಲಿ ಕೊಳವೆ ನೀರು ಸರಬರಾಜು ಯೋಜನೆಗಳ ಸಣ್ಣಪುಟ್ಟ ದುರಸ್ತಿ ಮತ್ತು ನಿರ್ವಹಣೆ ಕಾರ್ಯಗಳನ್ನು ಸ್ವತಃ ನಿರ್ವಹಿಸಲು ಸಾಧ್ಯವಾಗುತ್ತದೆ. ಇದರಿಂದ ಸ್ಥಳೀಯ ಮಟ್ಟದಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗುವುದರ ಜೊತೆಗೆ, ನೀರು ಸರಬರಾಜು ವ್ಯವಸ್ಥೆಯ ದಕ್ಷತೆ ಹೆಚ್ಚಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಾಚಾರ್ಯ ಮಹಾದೇವ ಕೆ. ಸರ್ಜಾಪೂರು, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಎ. ನಾಗರಾಜ, ಹಿರಿಯ ತರಬೇತಿ ಸಂಪನ್ಮೂಲ ವ್ಯಕ್ತಿಗಳು, ಅಧೀಕ್ಷಕಿ ತಾರಾಬಾಯಿ, ಎನ.ಆರ.ಎಲ.ಎಂ ಬಸವರಾಜ ಕಟ್ಟಿಮನಿ, ಮಲ್ಲಪ್ಪ , ಸೈಯದ್, ಮಂಜುನಾಥ, ಐಶ್ವರ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮಕ್ಕಳನ್ನು ಶಾಲೆಗೆ ಕಳುಹಿಸಿ. ಬಸ್ಸಯ್ಯನಾಯಕ ಸಾತಲ್

**ನೈಜ್ಯ ದೆಸೆ ನ್ಯೂಸ್**

**ಅರಕೇರಾ: ಶಿಕ್ಷಣ ಎಂಬುದು ಮಕ್ಕಳ ಭವಿಷ್ಯಕ್ಕೆ ಆಸ್ತಿ ಆಗಿರುವ ಹಿನ್ನಲೆಯಲ್ಲಿ ಪಾಲಕರು ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಿ ಯಾವುದೇ ಕಾರಣಕ್ಕೂ ಶಾಲೆಯಿಂದ ಹೊರಗುಳಿಸಬೇಡಿ ಎಂದು ವಲಯ ಸಂಪನ್ಮೂಲ ಅಧಿಕಾರಿ ಬಸಯ್ಯಸಾತಲ್ ನಾಯಕ ಹೇಳಿದರು.**

ಅವರು ಬಿ. ಗಣೆಕಲ್ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕಿರಿಯ ಪ್ರಾಥಮಿಕ ಶಾಲೆ ಮೂಕ ನಾಯಕ ತಾಂಡ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಗಂಗನಾಯಕ್ ತಾಂಡ ಶಾಲೆಯ 5ನೇ ತರಗತಿ ಮಕ್ಕಳಿಗೆ ಬೀಳ್ಕೊಡಿಗೆ ಹಾಗೂ ವಾರ್ಷಿಕೋತ್ಸವದ ಸಮಾರಂಭದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಶಾಲೆ ಈ ಎರಡು ಸರಕಾರಿ ಶಾಲೆಗಳು ಖಾಸಗಿ ಶಾಲೆಗಿಂತ ಚೆನ್ನಾಗಿ ಕಾಣುತ್ತದೆ ಮತ್ತು ಎರಡು ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟ ಶಿಕ್ಷಣ



ನೀಡಿ ಮಕ್ಕಳು ಮೊರಾರ್ಜಿ ಮತ್ತು ಆದರ್ಶ ಶಾಲೆಗಳಿಗೆ ಆಯ್ಕೆ ಯಾಗುವ ಮೂಲಕ ಶಾಲೆಗೆ ಕಿರ್ತಿತಂದುಕೊಟ್ಟಿದ್ದಾರೆ.

ಮೂಕ ನಾಯಕ ತಾಂಡಾದಲ್ಲಿ ಆರು ಮಕ್ಕಳಲ್ಲಿ ನಾಲ್ಕು ಮಕ್ಕಳನ್ನು ಮುರಾರ್ಜಿಗೆ ಆಯ್ಕೆಯಾಗಿರುತ್ತಾರೆ ಮತ್ತು ಗಂಗನಾಯಕ್ ತಾಂಡಾ 10 ಮಕ್ಕಳಲ್ಲಿ ಆರು ಮಕ್ಕಳು ಮೊರಾರ್ಜಿ ಮತ್ತು ಆದರ್ಶ ಆಯ್ಕೆಯಾಗಿದ್ದಾರೆ ಆಯ್ಕೆಯಾಗಿದ್ದಾರೆ. ಪಾಲಕರಲ್ಲಿ ತಮ್ಮ ಮಕ್ಕಳನ್ನು ಕೂಲಿ ಕೆಲಸಕ್ಕೆ ಕಳಿಸಬೇಡಿ ತಾವು ಶಾಲೆಗೆ ಮಕ್ಕಳನ್ನು ಕಳಿಸಿಕೊಡಲು ಪಾಲಕರಿಗೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳು ಸದ್ದಾಮ್ ಹುಸೇನ್ ಶಿಕ್ಷಕರಾದ ಹನುಮಂತರಾಯ.ಮಂಜುನಾಥ ನಾಯಕ ಕ್ಯಾದಿಗ್ಗೇರಾ. ಬಸವರಾಜ ಕೆ ಕ್ಯಾದಿಗ್ಗೇರಾ. ರವಿ ನಾಯಕ್ ಜೆಡಿಎಸ್ ಮುಖಂಡರು ಗಂಗನಾಯ್ಕ ತಾಂಡಾ ಮಾನಪ್ಪ ಮೂಕ ನಾಯ್ಕ ತಾಂಡ ತಿರುಪತಿ ವಾಚನ ನಾಯ್ಕತಾಂಡ ಊರಿನ ಹಿರಿಯರು ಪಾಲಕರು ಮೌನೇಶ ಮತ್ತು ಶಿವಕುಮಾರ್ ಬೇರೆ ಅತಿಥಿ ಶಿಕ್ಷಕರು ಮತ್ತು ಬೂದಾನಿಗಳು ಮತ್ತು ಅಡಿಗೆ ಸಹಾಯಕರು ಮತ್ತು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು ಕಾರ್ಯಕ್ರಮ ನಿರೂಪಣೆ ನರಸಪ್ಪ ಅತಿಥಿ ಶಿಕ್ಷಕರು ಕೊನೆಯಲ್ಲಿ ರಾಜು ವಂದಿಸಿದರು.

# ಎ 02 ರಂದು ಭಕ್ತಿಭಾವದಿಂದ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಬ್ರಹ್ಮರಥೋತ್ಸವ

**ನೈಜ್ಯ ದೆಸೆ ನ್ಯೂಸ್**

**ಜಾಲಹಳ್ಳಿ : ಗ್ರಾಮದಲ್ಲಿ ಎ 02 ಗುರುವಾರ ದಂದು ಭಕ್ತಿಭಾವದಿಂದ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಬ್ರಹ್ಮರಥೋತ್ಸವ ಅದ್ದೂರಿಯಾಗಿ ನಡೆಯಲಿದೆ. ಇಂದು ದಿನಾಂಕ 28–03–2026ರಂದು ರಂಗನಾಥ ದೇವಸ್ಥಾನದಲ್ಲಿ ಪೂಜಾರಿಗಳು ವರದಿಗಾರರ ಜೊತೆ ಮಾತನಾಡುತ್ತಾ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಈ ಮಹೋತ್ಸವ ಜರುಗಲಿದ್ದು, ಯುಗಾದಿಯಿಂದಲೇ ಕಾರ್ಯಕ್ರಮಗಳು ಆರಂಭವಾಗಿ ಪೂರ್ಣಿಮೆಯ ಚಿತ್ತ ನಕ್ಷತ್ರದಂದು ರಥೋತ್ಸವವು ನೆರವೇರುತ್ತದೆ.**

ಮಾಲಾಧಾರಿಗಳ ಪ್ರವಚನಕ್ಕಾಗಿ ಆಗಮಿಸುವ ವರದಾಚಾರ್ಯರು ಮಾತನಾಡಿ, ಜಾಲಹಳ್ಳಿಯ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಇತಿಹಾಸವು 15ನೇ ಶತಮಾನಕ್ಕೆ ಸೇರಿದದ್ದು ಎಂದು ತಿಳಿಸಿದರು. ಮುದುಗಲ್ಲಿನಿಂದ ಉಪ್ಪಿನ




ಚೀಲದಲ್ಲಿ ದೇವರು ಬಂದು ಇಲ್ಲಿ ನೆಲೆಸಿದ್ದಾನೆ ಎಂಬ ನಂಬಿಕೆ ಇದೆ. ಕಳೆದ 8?10 ವರ್ಷಗಳಿಂದ ಗೋವಿಂದ ಮಾಲಾದಾರಿಗಳ ಸಂಖ್ಯೆ ಸುಮಾರು 500ಕ್ಕೂ ಹೆಚ್ಚಾಗಿದೆ ಎಂದು ಅವರು ಹೇಳಿದರು. ರಥೋತ್ಸವದ ಸಂದರ್ಭದಲ್ಲಿ ಪ್ರತಿದಿನ ವಿಭಿನ್ನ ವಾಹನ ಸೇವೆಗಳು ನಡೆಯುತ್ತವೆ. ಪೂರ್ಣಿಮೆಯ ಚಿತ್ತ ನಕ್ಷತ್ರದಂದು ರಥೋತ್ಸವ ನಡೆಯುವ ವೇಳೆ ಸಂಜೀವರಾಯನ ಸನ್ನಿಧಿಯಲ್ಲಿ ಬೇವಿನ ಗಿಡ ಸಿಹಿಯಾಗುತ್ತದೆ ಎಂಬ ಪ್ರತೀಕವನ್ನು ಭಕ್ತರು ನಂಬುತ್ತಾರೆ.

ಶ್ರೀ ಲಕ್ಷ್ಮಿ ರಂಗನಾಥ ದೇವಸ್ಥಾನದ ದೇವಸ್ಥಾನದ ಪೂಜಾರಿ ಗಳಾದ ವೆಂಕೋಬ ಪೂಜಾರಿ ಮಾತನಾಡಿ, ಊರಿನ ಐದು ವತಂದಾರರು ( ಊರಿನ ದೊರೆಗಳು, ದೇಸಾಯಿ, ಕುಲಕರ್ಣಿ ಮನೆತನಗಳು ಮತ್ತು ದೈವದವರು) ಬಂದ ನಂತರ ಎಲ್ಲಾ ಕಾರ್ಯಕ್ರಮಗಳು ಆರಂಭವಾಗುತ್ತವೆ ಎಂದರು. ಭಕ್ತರು 9 ದಿನ ಕಾಲ ಚಪ್ಪಲಿ ಧರಿಸದೆ ವ್ರತ ಪಾಲಿಸುವ ಪದ್ಧತಿ ಇದೆ. ರಥೋತ್ಸವದ ಒಂದು ದಿನ ಮೊದಲು ಹಾಗೂ ರಥೋತ್ಸವದ ದಿನ ನೀರಿನ ಆಟ (ಜಲಕ್ರೀಡೆ) ನಡೆಯುವುದು ವಿಶೇಷ. ಪ್ರತಿ ವರ್ಷ ಸಾವಿರಾರು ಭಕ್ತರು ವಿವಿಧ ರಾಜ್ಯಗಳು ಹಾಗೂ ಜಿಲ್ಲೆಗಳಿಂದ ಭಾಗವಹಿಸುತ್ತಿದ್ದು, ಈ ಉತ್ಸವವು ಜಾತಿಭೇದವಿಲ್ಲದೆ ಸರ್ವಜನರ ಸಂಗಮವಾಗಿರುತ್ತದೆ. ಇದೇ ಸಂದರ್ಭದಲ್ಲಿ ಸುರೇಶ್ ಪೂಜಾರಿ ಮಾತನಾಡಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸಿ ರಥೋತ್ಸವ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಹೇಳಿದರು

ಈ ಸಂದರ್ಭದಲ್ಲಿ ದೇವಸ್ಥಾನದ ಪೂಜಾರಿಗಳಾದ ಸುರೇಶ್ ಪೂಜಾರಿ, ಗಂಗಾಧರ್ ಪೂಜಾರಿ, ವೆಂಕೋಬ ಪೂಜಾರಿ ಹಾಗೂ ಶ್ರೀ ಲಕ್ಷ್ಮಿ ರಂಗನಾಥ ಗೋವಿಂದ ಸೇವಾ ಸಮಿತಿ ಅಧ್ಯಕ್ಷ ವೆಂಕೋಬ ತ್ಯಾಪ್ಲಿ, ರಂಗಪ್ಪ ಬಂಡಿ ಮತ್ತು ಅನೇಕ ಗೋವಿಂದ ಮಾಲಾದಾರಿ ಯುವಕರು ಉಪಸ್ಥಿತರಿದ್ದರು.

**ರಥೋತ್ಸವ ಕಾರ್ಯಕ್ರಮಗಳ ವೇಳಾಪಟ್ಟಿ:**

**1. 29–03–2026 (ರವಿವಾರ) – ಏಕಾದಶಿ: ಹನುಮಂತನ ಸೇವೆ**

**2. 30–03–2026 (ಸೋಮವಾರ) – ದ್ವಾದಶಿ: ಕುದುರೆ ಸೇವೆ**

**3. 31–03–2026 (ಮಂಗಳವಾರ) – ತ್ರಯೋದಶಿ: ಗರುಡ ವಾಹನ ಸೇವೆ**

**4. 01–04–2026 (ಬುಧವಾರ) – ಚತುರ್ದಶಿ: ಆನೆ ಸೇವೆ**

**5. 02–04–2026 (ಗುರುವಾರ)–ಬ್ರಹ್ಮ ರಥೋತ್ಸವ**

**ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದೇವಸ್ಥಾನದ ಪೂಜಾರಿಗಳು ಮನವಿ ಮಾಡಿದ್ದಾರೆ.**

## ನೇಮಕಾತಿ ಪ್ರಕಟಣೆ

ಕರ್ನಾಟಕ ಕಂದಾಯ ಇಲಾಖೆ ನೇಮಕಾತಿ 2026–3 ಉಪ ತಹಶೀಲ್ದಾರ್, ಕಾನೂನು ಬೆರಳಚ್ಚುಗಾರ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಕರ್ನಾಟಕ ಕಂದಾಯ ಇಲಾಖೆ ನೇಮಕಾತಿ 2026: 3 ಉಪ ತಹಶೀಲ್ದಾರ್, ಕಾನೂನು ಬೆರಳಚ್ಚುಗಾರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಕಂದಾಯ ಇಲಾಖೆ ಮಾರ್ಚ್ 2026 ರ ಕರ್ನಾಟಕ ಕಂದಾಯ ಇಲಾಖೆಯ ಅಧಿಕೃತ ಅಧಿಸೂಚನೆಯ ಮೂಲಕ ಉಪ ತಹಶೀಲ್ದಾರ್, ಕಾನೂನು ಬೆರಳಚ್ಚುಗಾರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬೆಂಗಳೂರಿನಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು–ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 04–ಏಪ್ರಿಲ್–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 23–03–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 04–ಏಪ್ರಿಲ್–2026 ಅಧಿಕೃತ ವೆಬ್‌ಸೈಟ್: kandaya.karnataka.gov.in

## ಕಳೆದ ಒಂದು ದಶಕದಲ್ಲಿ 10 ಸಾವಿರ ನಕ್ಸಲರ ಶರಣಾಗತಿ..!

❑ ನೈಜ್ಯ ದೆಸೆ ನ್ಯೂಸ್

**ನವದೆಹಲಿ: ದೇಶದ ಸಾರ್ವಭೌಮತೆ, ಅಖಂಡತೆ, ಏಕತೆ ಹಾಗೂ ಭದ್ರತೆಗೆ ಸವಾಲಾಗಿ ಪರಿಣಮಿಸಿದ್ದ ನಕ್ಸಲೀಯರು ಮುಖ್ಯವಾಹಿನಿಯತ್ತ ಮುಖ ಮಾಡಿದ್ದು, ಕಳೆದ ಒಂದು ದಶಕದ ಅವಧಿಯಲ್ಲಿ ಸುಮಾರು 10,000ಕ್ಕೂ ಹೆಚ್ಚು ಮಾವೋವಾದಿಗಳು ಶಸಾ?ತ್ರಸ್ತ್ರ ತ್ಯಜಿಸಿ, ಉನ್ನತ ನಾಯಕತ್ವವನ್ನು ನಿರ್ಮೂಲನೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೇಶದ ಅತಿಹೆಚ್ಚು ಕಾಲ ನಡೆದ ಹೋರಾಟ ಗಳಲ್ಲಿ ಒಂದಾದ ನಕ್ಸಲಿಸಂಗೆ ಮಾರಕ ಹೊಡೆತ ನೀಡಿದ್ದು, ದೇಶದಿಂದ ನಕ್ಸಲಿಸಂ ನಿರ್ಮೂಲನೆ ಮಾಡಲು ಕೇಂದ್ರ ಗೃಹ ಸಚಿವಾಲಯ ಮಾ.31ರ ವರೆಗೆ ಗಡುವು ವಿಧಿಸಿತ್ತು.**



2025 ರಲ್ಲಿ, 2,300 ಮಾವೋವಾದಿಗಳು ಶಸಾ?ತ್ರಸ್ತ್ರ ತ್ಯಜಿಸಿದರೆ, 630ಕ್ಕೂ ಹೆಚ್ಚು ಕಾರ್ಯಕರ್ತರು 2026ರ ಮೊದಲ ಮೂರು ತಿಂಗಳಲ್ಲಿ ಸಶಸ್ತ್ರ ದಂಗೆಯ ಬದಲು ಮುಖ್ಯವಾಹಿನಿಯ ಜೀವನವನ್ನು ಆರಿಸಿಕೊಂಡಿದ್ದಾರೆ. 2014ರಿಂದ 2026ರ ಆರಂಭದವರೆಗಿನ ಶರಣಾಗತಿಗಳ ಅಧಿಕೃತ ಮಾಹಿತಿ ನೀಡಿವೆ. ಸರ್ಕಾರವು ಹಿಂದಿನ ಸರ್ಕಾರಗಳ ಕೆಲವು ನೀತಿಯನ್ನು ಕೈ ಬಿಟ್ಟು ಹೋರಾಟದಲ್ಲಿ ವಿಧಾನವನ್ನು ಬದಲಾಯಿಸುವ ಮೂಲಕ ನಕ್ಸಲಿಸಂ ವಿರುದ್ಧ ಏಕೀಕೃತ, ಬಹು ಆಯಾಮದ ಮತ್ತು ನಿರ್ಣಾಯಕ ಕಾರ್ಯತಂತ್ರವನ್ನು ಅಳವಡಿಸಿಕೊಂಡಿದೆ.ರೆಡ್ ಕಾರಿಡಾರ್‌ನಲ್ಲಿ ರಸ್ತೆ ಬೇಲಿ ಹಾಕುವುದು ಒಂದು ಉದಾಹರಣೆಯಾಗಿದೆ. ಇದು ಒಂದು ಕಾಲದಲ್ಲಿ ಬಿಹಾರ, ಛತ್ತೀಸ್‌ಗಢ, ಜಾಖರ್‌ಂಡ್, ಒಡಿಶಾ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಪಶುಪತಿಯಿಂದ ತಿರುಪತಿಯವರೆಗೆ ವಿಸ್ತರಿಸಲ್ಪಟ್ಟ ಒಂದು ಯೋಜನೆಯಾಗಿತ್ತು. ಅಲ್ಲಿ ಗುತ್ತಿಗೆದಾರರು ಕೆಲಸ ಮಾಡಲು ನಿರಾಕರಿಸಿದ್ದರು. ಕೇಂದ್ರವು ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಪ್ರಮುಖ ಪ್ರದೇಶಗಳಲ್ಲಿ ರಸ್ತೆಗಳನ್ನು ನಿರ್ಮಿಸುವ ಕೆಲಸವನ್ನು ಗಡಿ ರಸ್ತೆಗಳ ಸಂಘಟನೆಗೆ ವಹಿಸಿತು, ಇದರಲ್ಲಿ ಐದು ಪ್ರಮುಖ ರಸ್ತೆಗಳು ಮತ್ತು ಆರು ನಿರ್ಣಾಯಕ ಸೇತುವೆಗಳ ನಿರ್ಮಾಣವೂ ಸೇರಿದೆ.ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾವೋವಾದಿ) ಪೀಡಿತ ಪ್ರದೇಶಗಳಲ್ಲಿ 15,000 ಕಿಲೋಮೀಟರ್‌ಗಳಿಗೂ ಹೆಚ್ಚು ರಸ್ತೆಗಳನ್ನು ನಿರ್ಮಿಸಲಾಗಿದೆ. ಅದರಲ್ಲಿ 12,250 ಕಿಲೋಮೀಟರ್‌ಗ್ಗಳನ್ನು ಕಳೆದ 10 ವರ್ಷಗಳಲ್ಲಿಯೇ ಪೂರ್ಣಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 2014 ರಲ್ಲಿ 66 ಇದ್ದ ಕೋಟೆ ಪೊಲೀಸ್ ಠಾಣೆಗಳನ್ನು ಕಳೆದ 10 ವರ್ಷಗಳಲ್ಲಿ 586ಕ್ಕೆ ಏರಿಸಲಾಗಿದ್ದು, ದಂಗೆಕೋರರನ್ನು ಗಂಭೀರ ಆಂತರಿಕ ಭದ್ರತಾ ಸವಾಲು ಎಂದು ಕರೆಯಲಾಗುತ್ತಿತ್ತು, ಒಮೆ ಗುಂಡಿನ ದಾಳಿ ಎಂದು ಕರೆಯಲಾಗುತ್ತಿದ್ದ ಪ್ರದೇಶಗಳಲ್ಲಿ ಇದನ್ನು ನಿರ್ಮಿಸಲಾಗಿದೆ. ಹೆಚ್ಚುವರಿಯಾಗಿ ಕಳೆದ 6 ವರ್ಷಗಳಲ್ಲಿ 361 ಹೊಸ ಭದ್ರತಾ ಶಿಬಿರಗಳನ್ನು ಸ್ಥಾಪಿಸಲಾಗಿದೆ. ಕಾರ್ಯಾಚರಣೆಯ ವ್ಯಾಪ್ತಿಯನ್ನು ಬಲಪಡಿಸಲು 68 ರಾತ್ರಿ–ಲ್ಯಾಂಡಿಂಗ್ ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆ. ಇದರ ಪರಿಣಾಮ 2013ರಲ್ಲಿ 76 ಜಿಲ್ಲೆಗಳಲ್ಲಿ 330ರಷ್ಟಿದ್ದ ನಕ್ಸಲ್ ಘಟನೆಗಳನ್ನು ದಾಖಲಿಸುವ ಪೊಲೀಸ್ ಠಾಣೆಗಳ ಸಂಖ್ಯೆ ಜೂನ್ 2025ರ ವೇಳೆಗೆ 22 ಜಿಲ್ಲೆಗಳಲ್ಲಿ ಕೇವಲ 52 ಕ್ಕೆ ಇಳಿದಿದೆ. ಭದ್ರತಾ ಒತ್ತಡ ಮತ್ತು ಪುನರ್ವಸತಿ ಪ್ರಯತ್ನಗಳ ಸಂಯೋಜನೆಯ ಮೇಲೆ ಕೇಂದ್ರೀಕರಿಸುವ ಸರ್ಕಾರದ ಕಾರ್ಯತಂತ್ರವು ಚಳುವಳಿಯ ಮೂಲವನ್ನು ಚಿವುಟಿ ಹಾಕಿದೆ. ಛತ್ತೀಸ್‌ಗಢದಲ್ಲಿ ಅದು ತಲೆ ಇಲ್ಲದಂತಾಗಿದೆ. ಆಡಳಿತ ದುರ್ಬಲಗೊಂಡ ಮತ್ತು ಮಾವೋವಾದಿಗಳು ಅಂಚಿನಲ್ಲಿರುವ ಸಮುದಾಯಗಳಲ್ಲಿ ಬಲವಂತ ಮತ್ತು ಒಪ್ಪಿಗೆ ಎರಡನ್ನೂ ಬೆಳೆಸಿದ ಪ್ರದೇಶಗಳಲ್ಲಿ ಸರ್ಕಾರಿ ಯೋಜನೆಗಳ ಫಲಗಳು ಸಾಮಾನ್ಯಜನರನ್ನು ತಲುಪಲು ಪ್ರಾರಂಭಿಸಿದವು. ಮಂತ್ರಿ–ಆವಾಸ್ ಯೋಜನೆಯಡಿ, ಮಂಜೂರಾದ ಮನೆಗಳ ಸಂಖ್ಯೆ ಮಾರ್ಚ್ 2024 ರಲ್ಲಿ 92,847 ರಿಂದ ಅಕ್ಟೋಬರ್ 2025 ರಲ್ಲಿ 2,54,045 ಕ್ಕೆ ಏರಿತು.

## ಮಹಿಳೆಮೇಲೆ ಅತ್ಯಾಚಾರ , ಮಹಿಳೆ ನೇಣಿಗೆ ಶರಣು ಆರೋಪಿ ಅರೆಸ್ಟ್. ಉಳಿದ ಐವರು ಪರಾರಿ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಸರಸ್ವತಿ ( ಮೃತ ಮಹಿಳೆ ) ಯ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಬಂದು ಮಹಿಳೆಯ ಮೇಲೆ ಎರಗಿ ಅತ್ಯಾಚಾರ ವೆಸಗಿದ ಘಟನೆ ಮಿಂಚೇರಿ ತಾಂಡ – 2 ರಲ್ಲಿ ಘಟನೆ ನಡೆದಿದೆ**

ಸರಸ್ವತಿ ಗಂಡ ಮುತ್ತು ಚೌಹಣ್ ವಯಸ್ಸು 21 ವರ್ಷ ಈಕೆ ಅತ್ಯಾಚಾರಕ್ಕೆ ಒಳಗಾಗಿ ಮರಿಯಾದೆಗೆ ಹೆದರಿ ನೇಣಿಗೆ ಶರಣಾದ ಮಹಿಳೆ ಈಕೆ ಒಂದು ತಿಂಗಳ ಹಿಂದೆ ಗಂಡನ ಮನೆಯಿಂದ ತನ್ನ ತವರು ಮನೆಗೆ ಬಂದಿದ್ದು ದಿನಾಂಕ 26–3–26ರಮದ್ಯಾಹ್ನ ಇತ್ತ ಮಹಿಳೆಯ ಮನೆಯವರೆಲ್ಲರೂ ತನ್ನ ಸಣ್ಣ ಮಗಳನ್ನು ಗಂಡನ ಮನೆಗೆ ಬಿಟ್ಟು ಬರಲು ಹೋಗಿದ್ದರು ಇದನ್ನು ತಿಳಿದ



ಆರೋಪಿ ರಾಹುಲ್ ತಂದೆ ಅಮರೇಶ್ ವಯಸ್ಸು –22 ವರ್ಷ ಮಹಿಳೆಯ ಮನೆಯಲ್ಲಿ ಯಾರು ಇಲ್ಲದ ಸಮಯ ನೋಡಿ ಮನೆಗೆ ನುಗ್ಗಿ ಮಹಿಳೆ ಮೇಲೆ ಎರಗಿ ಅತ್ಯಾಚಾರ ಮಾಡಿದ್ದಾನೆ ನಂತರ ಸಂಜೆ ಊರಿಂದ ಬಂದ ಮಹಿಳೆಯ ಮನೆಯವರು ಮಹಿಳೆ ಚಿರಾಡುತಿ–ದ್ದದ್ದನ್ನು ಕಂಡು ಮನೆಯವರು ಕೇಳಿದಾಗ ರಾಹುಲ್ ಎಂಬಾತನು ಬಂದು ಬಲವಂತವಾಗಿ ಅತ್ಯಾಚಾರ ಮಾಡಿದ್ದಾನೆಂದು ಮನೆಯವರಿಗೆ ನಡೆದ ವಿಷಯ ತಿಳಿಸಿದಳು , ಇದನ್ನು ಅರಿತ ಆರೋಪಿಯ ಕಡೆಯವರು ಅಕ್ರಮ ಕೂಟ ಕಟ್ಟಿಕೊಂಡು ಮೃತ ಮಹಿಳೆಯ ಮನೆಯವರ ಮೇಲೆ ಎರಗಿ ಚನ್ನಾಗಿ ಥಳಿಸಿದ್ದಾರೆಂದು ಗೋವಿಂದಪ್ಪ ತಂದೆ ರಾಮಪ್ಪ ರಾಠೋಡ್ ಕೊಟ್ಟ ದೂರಿನ ಅನ್ವಯ ಲಿಂಗಸಗೂರು ಪೊಲೀಸರು ಪ್ರಕರಣ ದಾಖಲಿಸಿ ಅತ್ಯಾಚಾರ ಮಾಡಿದ ಆರೋಪಿಯನ್ನು ಬಂಧಿಸಿ ಇನ್ನುಳಿದ ಆರೋಪಿಗಳ ಬಂದನಕ್ಕೆ ಪೊಲೀಸರು ಬಲೆ ಬಿಸಿದ್ದಾರೆಂದು ತಿಳಿದು ಬಂದಿದೆ .

# ಡ್ರಗ್ಸ್ ಮುಕ್ತ ರಾಜ್ಯ ಸಂಕಲ್ಪ : ಸಿಎಂ

❑ ನೈಜ್ಯ ದೆಸೆ ನ್ಯೂಸ್

**ರಾಜ್ಯವನ್ನು ಮಾದಕ ವಸ್ತು ಮುಕ್ತ ಮಾಡುವುದು ರಾಜ್ಯ ಸರ್ಕಾರದ ಸಂಕಲ್ಪವಾಗಿದೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು. ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿಂದು ಮೈಸೂರು ಘಟಕದ 46ನೇ ತಂಡದ ಸಿವಿಲ್ ಪೊಲೀಸ್ ಉಪನಿರೀಕ್ಷಕ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಪಾಲ್ಗೊಂಡು ತರಬೇತಿ ಪೂರ್ಣಗೊಳಿಸಿದ ಎಲ್ಲ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ಶುಭ ಹಾರೈಸಿ ಮಾತನಾಡಿದ ಅವರು, ಮಾದಕ ವಸ್ತು ಮುಕ್ತ ಸಮಾಜ ನಿರ್ಮಾಣ ಮಾಡುವುದಾಗಿ ಸರ್ಕಾರ ಘೋಷಣೆ ಮಾಡಿದೆ.**

ಈ ನಿಟ್ಟಿನಲ್ಲಿ ಪೊಲೀಸರು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಮಾದಕ ವಸ್ತು ತಯಾರಕರು ,ಮಾರಾಟ ಮಾಡುವವರ



ಮೇಲೆ ಕ್ರಮ ಕೈಗೊಳ್ಳಬೇಕು ಎಂದರು. ಮಾದಕ ವಸ್ತುಗಳು ಯುವ ಜನಾಂಗದ ಮೇಲೆ ಮಾರಕ ಪರಿಣಾಮ ಬೀರುತ್ತವೆ. ಇದನ್ನು ನಿರ್ಮೂಲನೆ ಮಾಡದೆ ಹೋದರೆ ಸಮಾಜದ ಸ್ವಾಸ್ಥ್ಯ ಕಾಪಾಡಲು ಸಾಧ್ಯವಿಲ್ಲ. ಆದ್ದರಿಂದ ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಅಗತ್ಯ ಎಂದರು. ಮಾದಕ ವಸ್ತುಗಳ ಸರಬರಾಜು, ತಯಾ–ರಿಕೆಯನ್ನು ನಿಲ್ಲಿಸಿ, ರಾಜ್ಯವನ್ನು ಮಾದಕ ವಸ್ತು ಮುಕ್ತ ರಾಜ್ಯವನ್ನಾಗಿಸುವುದು ರಾಜ್ಯ ಸರ್ಕಾರದ ಸಂಕಲ್ಪವಾಗಿದೆ. ಈ ದಿಕ್ಕಿನಲ್ಲಿ ಸರ್ಕಾರ ಕಾರ್ಯತತ್ಪರವಾಗಿದೆ. ಪೊಲೀಸ–ರಿಗೂ ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದ್ದೇವೆ ಎಂದು ಹೇಳಿದರು. ಜನಸ್ನೇಹಿ ಮತ್ತು ಮಾನವೀಯತೆಯಿಂದ ಗುರುತಿಸಿ : ಪೊಲೀಸರು ಸದಾ ಜನಸ್ನೇಹಿಯಾಗಿರಬೇಕು ಮಾನವೀಯತೆಯಿಂದ ಕೆಲಸ ಮಾಡಬೇಕು. ಸಾರ್ವಜನಿಕರ ಜತೆ ಸ್ನೇಹದಿಂದ ಇರಬೇಕು. ಅಪರಾಧಿಗಳಿಗೆ ಕರುಣೆ ತೋರಬೇಕಿಲ್ಲ. ನಿರಪರಾಧಿಗಳಿಗೆ ಕರುಣೆ ತೋರಬೇಕು ಎಂದರು.

ನ್ಯಾಯ ವಿತರಣೆಯಲ್ಲಿ ಪೊಲೀಸರು ಯಾವುದೇ ಕಾರಣಕ್ಕೂ ರಾಜಿಯಾಗಬಾರದು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು. ಎಲ್ಲರಿಗೂ ರಕ್ಷಣೆ, ಸಮಾನ ಅವಕಾಶಗಳು ದೊರೆಯಬೇಕು. ಪೊಲೀಸ್ ಸೇವೆಯಲ್ಲಿ ಶಿಸ್ತು, ಸಂಯಮ, ಪ್ರಾಮಾಣಿಕತೆ, ಮಾನವೀಯತೆ ಬಹಳ ಮುಖ್ಯ ಎಂದರು. ಸಮಾಜದಲ್ಲಿ ಜಾತಿ ವ್ಯವಸ್ಥೆ ಇದೆ. ದೀನ ದಲಿತರ, ಅಶಕ್ತರ, ಮಹಿಳೆಯರ ರಕ್ಷಣೆ ಪೊಲೀಸರ ಜವಾಬ್ದಾರಿ ಎಂದು ಮುಖ್ಯಮಂತ್ರಿಗಳು ಹೇಳಿದರು.

## ಜನಪರ ಆಡಳಿತಕ್ಕಾಗಿ ಕಾಂಗ್ರೆಸ್ ಗೆಲ್ಲಿಸಿ–ಸಚಿವ ಎನ್ ಎಸ್ ಬೋಸರಾಜು

❑ ನೈಜ್ಯ ದೆಸೆ ನ್ಯೂಸ್

**ಕಣ್ಣೂರು: ದೇಶದಲ್ಲಿ ಶಾಂತಿ ಸೌಹಾರ್ದತೆ ಹಾಗೂ ಸಮ ಸಮಾಜ ನಿರ್ಮಾಣಕ್ಕಾಗಿ ಸೇರಿದಂತೆ ಸರ್ವಾಂಗಿನ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು ಎಂದು ಕರ್ನಾಟಕ ರಾಜ್ಯದ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ಕೇರಳ ವಿಧಾನಸಭಾ ಚುನಾವಣೆಯಲ್ಲಿ ಪ್ರಚಾರ ಸಂದರ್ಭದಲ್ಲಿ ಮಾತನಾಡಿದರು.**

ಕೇರಳ ವಿಧಾನಸಭಾ ಚುನಾವಣೆಯ ನಿಮಿತ್ತ ಕರ್ನಾಟಕ ಸರ್ಕಾರದ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ಕೇರಳ ರಾಜ್ಯದ ತಿಕ್ಕರಿಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೋಡ್ ಶೋ ಮೂಲಕ ಭರ್ಜರಿ ಪ್ರಚಾರ ನಡೆಸಿದರು. ಕಾಂಗ್ರೆಸ್ ಪಕ್ಷ ಸ್ವತಂತ್ರ ಪೂರ್ವ ದಿಂದಲೂ



ಅನೇಕ ಜನಪರ ಯೋಜನೆಯ ಗುರಿಯೊಂದಿಗೆ ಅಧಿಕಾರದಲ್ಲಿದ್ದಾಗ ಜನಪರ ಆಡಳಿತದ ನೀಡಿದ ಹೆಮ್ಮೆಯ ಪಕ್ಷವಾಗಿದೆ, ನಮ್ಮೆಲ್ಲರ ಐಕ್ಯತೆ ಹಾಗೂ ಸರ್ವ ಜನಾಂಗದ ಆರ್ಥಿಕ ಸಾಮಾಜಿ–ಕ ಶೈಕ್ಷಣಿಕ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷದ ಕೈ ಹಿಡಿಯಬೇಕು ಎಂದು ಮತಯಾಚನೆ ಮಾಡಿದರು.

ದೇಶದ ಆರ್ಥಿಕ ಸಾಮಾಜಿ–ಕ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷ ಮಹತ್ತರವಾದ ಕೊಡುಗೆಯನ್ನು ನೀಡಿದೆ. ಸಾಮಾಜಿಕ ಸಮಾನತೆಗಾಗಿ, ಕಾಂಗ್ರೆಸ್ ಪಕ್ಷ ನೀಡಿದ ಎಲ್ಲಾ ಪ್ರಣಾಳಿಕೆಗಳ ಈಡೇರಿಕಗಾಗಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಬೇಕು ಎಂದು ಮತದಾರರಲ್ಲಿ ಮನವಿ ಮಾಡಿದರು. ಈಗಾಗಲೇ ಕರ್ನಾಟಕ ಮತ್ತು ತೆಲಂಗಾಣದಲ್ಲಿ ನಮ್ಮ ಸರ್ಕಾರ ಆಡಳಿತದಲ್ಲಿದ್ದು ಚುನಾವಣೆಯಲ್ಲಿ ನೀಡಿದ ಎಲ್ಲಾ ಭರವಸೆಗಳನ್ನ ಈಡೇರಿಸುವ ಮೂಲಕ ಜನಮನ್ನಣೆಯನ್ನು ಗಳಿಸಿದ್ದೇವೆ. ದೇಶದಲ್ಲಿ



ನುಡಿದಂತೆ ನಡೆಯುವ ಪಕ್ಷ ಯಾವುದಾದರು ಇದ್ದರೆ ಅದು ಕಾಂಗ್ರೆಸ್ ಪಕ್ಷ ಎಂದು ತಿಳಿಸಿದರು.

ನಂತರ ವಿವಿಧ ವಿಧಾನ ಸಭಾ ಕ್ಷೇತ್ರಗಳ ಬ್ಲಾಕ್ ಮಟ್ಟದಲ್ಲಿ ಕಾರ್ಯಕರ್ತರನ್ನು ಭೇಟಿ ಮಾಡಿ ಚುನಾವಣೆ ಗೆಲುವಿನ ತಂತ್ರಗಾರಿಕೆಯ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಮಾರ್ಟಿನ್ ಜಾರ್ಜ್, ಕಣ್ಣೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಮಾಜಿ ಶಾಸಕರಾದ ವೇಣುಗೋಪಾಲ್ ಸೇರಿ ಮುಂಚೂಣಿಯ ನಾಯಕರು ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

## ಸ್ವಾವಲಂಬಿ ಸಾರಥಿ ಯೋಜನೆಯಡಿ ಆಯ್ಕೆಯಾದ ಒಟ್ಟು 04 ಫಲಾನುಭವಿಗಳಿಗೆ ವಾಹನಗಳನ್ನು ಹಸ್ತಾಂತರಿಸಿದ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಒಕ್ಕಲಿಗ ಅಭಿವೃದ್ಧಿ ನಿಗಮ, ಉಪ್ಪಾರ್ ಅಭಿವೃದ್ಧಿ ನಿಗಮ ಹಾಗೂ ಸವಿತಾ ಸಮಾಜ ಅಭಿವೃದ್ಧಿ ನಿಗಮಗಳ ಸಹಯೋಗದಲ್ಲಿ ಜಾರಿಗೆ ತಂದಿರುವ ಸ್ವಾವಲಂಬಿ ಸಾರಥಿ ಯೋಜನೆಯಡಿ ಆಯ್ಕೆಯಾದ ಒಟ್ಟು 04 ಫಲಾನುಭವಿಗಳಿಗೆ ಜನಸ್ಪಂದನ ಕಚೇರಿಯಲ್ಲಿ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರು ವಾಹನಗಳ ಕೀಗಳನ್ನು ಹಸ್ತಾಂತರಿಸುವ ಮೂಲಕ ವಿತರಣೆ ಕಾರ್ಯಕ್ರಮ ನೆರವೇರಿಸಿದರು.**

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಮಾಜದ ಆರ್ಥಿಕವಾಗಿ ಹಿಂದುಳಿದ



ವರ್ಗದ ಜನರಿಗೆ ಸ್ವ ಉದ್ಯೋಗದ ಅವಕಾಶಗಳನ್ನು ಕಲ್ಪಿಸುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದೆ. ಯುವಕರು ಹಾಗೂ ನಿರುದ್ಯೋಗಿಗಳು ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ಸ್ವಾವಲಂಬಿ ಜೀವನ ನಡೆಸಬೇಕು ಎಂದು ಹೇಳಿದರು. ಸರ್ಕಾರದ ವಿವಿಧ ಅಭಿವೃದ್ಧಿ ನಿಗಮಗಳ ಮೂಲಕ ನೀಡಲಾಗುತ್ತಿರುವ ಸಹಾಯಧನ ಮತ್ತು ಸಾಲ ಸೌಲಭ್ಯಗಳು ಕುಟುಂಬಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗುತ್ತಿವೆ ಎಂದರು.

ವಾಹನಗಳನ್ನು ಪಡೆದ ಫಲಾನುಭವಿಗಳು ಸಂತಸ ವ್ಯಕ್ತಪಡಿಸಿ, ಸರ್ಕಾರದ ನೆರವಿನಿಂದ ತಮ್ಮ ಉದ್ಯೋಗ ಜೀವನಕ್ಕೆ ಹೊಸ ದಾ–ರಿಯ ತೆರೆದಿದೆ ಎಂದು ಅಭಿಪ್ರಾಯಪಟ್ಟರು. ಯೋಜನೆಯಡಿ ನೀಡಲಾದ ವಾಹನಗಳನ್ನು ಉಪಯೋಗಿಸಿ ಉತ್ತಮ ಸೇವೆ ನೀಡುವುದರ ಜೊತೆಗೆ ಕುಟುಂಬದ ಜೀವನಮಟ್ಟವನ್ನು ಸುಧಾರಿಸುವ ವಿಶ್ವಾಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಅಭಿವೃದ್ಧಿ ನಿಗಮಗಳ ಅಧಿಕಾ–ರಿಗಳು, ಜನಪ್ರತಿನಿಧಿಗಳು, ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ಕಾರ್ಯಕ್ರಮವು ಸರಳವಾಗಿ ಹಾಗೂ ಅರ್ಥಪೂರ್ಣವಾಗಿ ನೆರವೇರಿತು.

## ವಿಶ್ವಕರ್ಮ ಬಂಧುಗಳ ಆರಕ್ಷತೆ ಸಮಾರಂಭದಲ್ಲಿ ಪರಿಸರ ಜಾಗೃತಿಗಾಗಿ 501 ಸಸಿ ವಿತರಣೆ ಹಾಗೂ ಪಕ್ಷಿಗಳ ಅರವಟ್ಟಿಗೆ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಕೆ.ಹೊಸಹಳ್ಳಿ ಶರಣಬಸವೇಶ್ವರ ದೇವಸ್ಥಾನದಲ್ಲಿ ವಿಶ್ವಕರ್ಮ ಬಂಧುಗಳು ಮತ್ತು ವನಸಿರಿ ಫೌಂಡೇಷನ್ ಸಹಯೋಗದಲ್ಲಿ ವಿಶ್ವಕರ್ಮ ಬಂಧುಗಳ ಆರತಕ್ಷತೆ ಸಮಾರಂಭದಲ್ಲಿ 501 ಸಸಿ ವಿತರಣೆ ಮತ್ತು ಪಕ್ಷಿಗಳಿಗೆ ನೀರಿನ ಅರವಟ್ಟಿಗೆ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕ–ರಿಗೆ ಪರಿಸರ ಜಾಗೃತಿ ಮೂಡಿಸಲಾಯಿತು.**

ಪರಿಸರ ಜಾಗೃತಿಯು ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಲು, ಮಾಲಿನ್ಯ ತಡೆಯಲು ಮತ್ತು ಸುಸ್ಥಿರ ಭವಿಷ್ಯಕ್ಕಾಗಿ ಅತ್ಯಗತ್ಯವಾಗಿದೆ.ಇದು ಪ್ರತಿಯೊಬ್ಬ ನಾಗ–ರಿಕನ ನೈತಿಕ ಜವಾಬ್ದಾರಿಯಾಗಿದ್ದು,ಶಿಕ್ಷಣ,ಮರ ನೆಡುವಿಕೆ,ಪ್ಲಾಸ್ಟಿಕ್ ನಿರ್ಮೂಲನೆ ಮತ್ತು ಸಾಮಾಜಿಕ ಮೌಲ್ಯಗಳಾದ ಜವಾಬ್ದಾರಿಯುತ ನಡವಳಿಕೆಯ ಮೂಲಕ ಪರಿಸರ ಸ್ನೇಹಿ



ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದನ್ನು ಒಳಗೊಂಡಿದೆ."ಕಾಡಿದ್ದರೆ ನಾವು,ನಾವಿದ್ದರೆ ನಾಡು" ಎಂಬ ತತ್ವದ ಅಡಿಯಲ್ಲಿ ಸಮುದಾಯದ ಸಹಭಾಗಿತ್ವದಲ್ಲಿ ಪರಿಸರ ಸಂರಕ್ಷಣೆ,ಜಲಮೂಲಗಳ ರಕ್ಷಣೆ ಮತ್ತು ಪರಿಸರ ಸ್ನೇಹಿ ಉತ್ಪನ್ನಗಳ ಬಳಕೆ ಮಾಡುವುದು ಪರಿಸರ ಸಂರಕ್ಷಣೆಯ ಜವಾಬ್ದಾರಿಯಾಗಿದೆ. ಎಂದು ಚನ್ನಪ್ಪ ವಿಶ್ವಕರ್ಮ ತಿಳಿಸಿದರು.

ಸಿಂಧನೂರು ತಾಲೂಕಿನ ಕೆ.ಹೊಸಹಳ್ಳಿ ಗ್ರಾಮದಲ್ಲಿ ಚನ್ನಪ್ಪ ವಿಶ್ವಕರ್ಮ ಅವರು ಶ್ರಮಿಕ–ರಿಗೆ ನೆರಳಾಗಲೆನ್ನುವ ಆಶಯದೊಂದಿಗೆ ವಿಶ್ವಕರ್ಮ ಬಂಧುಗಳ ಆರತಕ್ಷತೆ ಸಮಾರಂಭದಲ್ಲಿ 501 ಸಸಿಗಳ ವಿತರಣೆ ಮಾಡಿ ಪರಿಸರ ಸ್ನೇಹಿಯಾಗಿ ಸಸಿ ನೆಡುವ ಮೂಲಕ ಆಚರಿಸುವುದಾಗಿ ಜೊತೆಗೆ ಬೇಸಿಗೆಯಲ್ಲಿ ಪ್ರಾಣಿ ಪಕ್ಷಿಗಳು ಕೂಡಾ ನೀರಿನ ಅಹಕಾರ ಇರುವುದ–ರಿಂದ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ನೀರಿನ ಅರವಟ್ಟಿಗೆ ಕಾರ್ಯಕ್ರಮ ಹಮ್ಮಿಕೊಂಡಿರುವುದು ತುಂಬಾ ಶ್ಲಾಘನೀಯ ಕಾರ್ಯ ಎಂದು ಪರಿಸರ ರಾಜ್ಯ ಪ್ರಶಸ್ತಿ ಪುರಸ್ಕೃತ ಹಾಗೂ ವನಸಿರಿ ಪೌಂಡೇಷನ್ ಅಧ್ಯಕ್ಷ ಅಮರೇಗೌಡ ಮಲ್ಲಾಪುರ ತಿಳಿದರು. ವಿನೂತನವಾಗಿ ವಿವಾಹವಾಗುತ್ತಿರುವ ಸಂಗೀತಾ ಜೊತೆ ಶ್ರೀನಾಥ ಅವರ ಆದರ್ಶವಾಗಿ ಪರಿಸರ ಪ್ರೇಮಿಯಾಗಿ ಆಚರಿಸುತ್ತಿರುವುದು ಗ್ರಾಮದಲ್ಲಿ ನಡೆದ ವಿಶೇಷ ಪ್ರಯತ್ನ ಎನ್ನಬಹುದಾಗಿದೆ. ಇದೇ ವೇಳೆ ಮಹಿಳೆಯರು ಪರಿಸರ ಪ್ರೇಮಿಗಳು ಅತ್ಯಂತ ಉತ್ಸಾಹದಿಂದ ಸಸಿಗಳನ್ನು ಕೊಂಡೊಯ್ದರು.

ಈ ಕಾರ್ಯಕ್ರಮವು ಸರಳ ಮತ್ತು ಸ್ಪಷ್ಟ ಉದ್ದೇಶದೊಂದಿಗೆ ನಡೆಯಿತು. ಪರಿಸರವನ್ನ ಪ್ರೀತಿಸುವ ಮತ್ತು ಪ್ರೋತ್ಸಾಹಿಸುವ ಮುಗ್ಧ ಮನಸ್ಸುಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಈ ಸಂಧರ್ಭದಲ್ಲಿ ವಿಶ್ವಕರ್ಮ ಸಮಾಜದ ಗುರುಹಿ–ರಿಯರು,ವನಸಿರಿ ಪೌಂಡೇಷನ್ ಸದಸ್ಯರು,ಗ್ರಾಮ ಪಂಚಾಯತ ಸದಸ್ಯರು,ಕುಟುಂಬದ ಸದಸ್ಯರು,ಕುಟುಂಬ ಹಿತೈಷಿಗಳು, ಊರಿನ ಹಿರಿಯರು, ಶ್ರೀ ಶರಣಬಸವೇಶ್ವರ ಯುವಕ ಮಂಡಳಿ ಸದಸ್ಯರು,ಹಳೆಯ ವಿದ್ಯಾರ್ಥಿಗಳ ಸಂಘದ ಸದಸ್ಯರು ಭಾಗವಹಿಸಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಸೆರಾಮಿಕ್ ಮತ್ತು ಸಿಮೆಂಟ್ ತಂತ್ರಜ್ಞಾನ

ಸೆರಾಮಿಕ್ ಮತ್ತು ಸಿಮೆಂಟ್ ತಂತ್ರಜ್ಞಾನ ಸ್ಥಳೀಯ ಮತ್ತು ಜಾಗತಿಕ ಕೈಗಾರಿಕೆಗಳು ಮತ್ತು ಸಂಸ್ಥೆಗಳಿಗೆ ಸೇವೆ ಸಲ್ಲಿಸಲು ಸೆರಾಮಿಕ್ ಮತ್ತು ಸಿಮೆಂಟ್ ತಂತ್ರಜ್ಞಾನ ಕ್ಷೇತ್ರದಲ್ಲಿ ಅತ್ಯಾಕರ್ಷಕ ಕಲಿಕಾ ವಾತಾವರಣವನ್ನು ಒದಗಿಸಲು ಮತ್ತು ಕಲಿತ ಮತ್ತು ಕೌಶಲ್ಯಪೂರ್ಣ ಎಂಜಿನಿಯರ್‌ಗಳನ್ನು ಒದಗಿಸುವ ದೃಷ್ಟಿಕೋನದೊಂದಿಗೆ ಸೆರಾಮಿಕ್ ಮತ್ತು ಸಿಮೆಂಟ್ ತಂತ್ರಜ್ಞಾನ ವಿಭಾಗವನ್ನು 1981 ರಲ್ಲಿ ಸ್ಥಾಪಿಸಲಾಯಿತು. ಇದರ ಆರಂಭದಿಂದಲೂ ವಿಭಾಗವು ಪ್ರಮುಖ ಕೈಗಾರಿಕೆಗಳಲ್ಲಿ ಸೇವೆ ಸಲ್ಲಿಸುತ್ತಿರುವ 500 ಕ್ಕೂ ಹೆಚ್ಚು ಪದವೀಧರರನ್ನು ಸೃಷ್ಟಿಸಿದೆ, ಕೆಲವು ಹೆಸರಿಸಲು ಬಿಎಚ್‌ಇಎಲ್, ಕಾರ್ನಿಂಗ್ ಗ್ಲಾಸ್, ಜೆ-ಎಸ್‌ಡಬ್ಲ್ಯೂ, ಎಸಿಸಿ, ಅಲ್ಟ್ರಾಟೆಕ್, ಶ್ರೀ ಸಿಮೆಂಟ್ಸ್, ಸೇಂಟ್-ಗೋಬಿನ್, ಜಾನ್ಸನ್, ಭಾರತ್ ಪಾಟರಿಗಳು, ಇತ್ಯಾದಿ. ವಿಭಾಗವು ಃಇಖಿ ಮೇಲ್ಮೈ ವಿಸ್ತೀರ್ಣ ವಿಶ್ಲೇಷಕ, ಈಖಿಖಿಖ, ಫ್ಲೇಮ್ ಫೋಟೊಮೀಟರ್, AAS, ಪೈರೋಮೆಟ್ರಿಕ್ ಕೋನ್ ಸಮಾನ ಮತ್ತು ಲೋಡ್ ಅಡಿಯಲ್ಲಿ ವಕ್ರೀಭವನ ಮುಂತಾದ ಅತ್ಯಾಧುನಿಕ ಉಪಕರಣಗಳೊಂದಿಗೆ ಸಜ್ಜುಗೊಂಡಿದೆ. ನಮ್ಮ ವಿಭಾಗವು ಖಖಖಿ ಗಳು, IISc ಮತ್ತು ಓಖಖಿ ಗಳಿಂದ ಸ್ನಾತಕೋತ್ತರ ಮತ್ತು ಪಿಎಚ್‌ಡಿ ಹೊಂದಿರುವ ಉತ್ತಮ ಅರ್ಹತೆಯ ಅಧ್ಯಾಪಕರನ್ನು ಹೊಂದಿದೆ. ವಿಭಾಗದ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಉತ್ತಮವಾಗಿ ಯೋಜಿಸಲಾಗಿದೆ ಮತ್ತು ಸೆರಾಮಿಕ್ ಮತ್ತು ಸಿಮೆಂಟ್ ತಂತ್ರಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ವಿನ್ಯಾಸಗೊಳಿಸಲಾಗಿದೆ, ಸ್ವತಂತ್ರ ಚಿಂತನೆಯನ್ನು ಪ್ರೋತ್ಸಾಹಿಸುತ್ತದೆ ಮತ್ತು ಪ್ರತಿಯೊಬ್ಬ ಪದವೀಧರರು ವೃತ್ತಿಪರ ನೀತಿಶಾಸ್ತ್ರ, ಸ್ವಾಭಿಮಾನ, ಕಲಿಕೆಯ ಮೇಲಿನ ಆಜೀವ ಪ್ರೀತಿ ಮತ್ತು ಆತ್ಮವಿಶ್ವಾಸವನ್ನು ಹೊಂದಿರುತ್ತಾರೆ ಎಂದು ಖಚಿತಪಡಿಸುತ್ತದೆ. ಪಠ್ಯಕ್ರಮವು ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ಮತ್ತು ಸಮ್ಮೇಳನಗಳನ್ನು ಆಯೋಜಿಸುವ ಮೂಲಕ ಮತ್ತು ವಿದ್ಯಾರ್ಥಿಗಳು ವಿಚಾರ ಸಂಕಿರಣಗಳು ಮತ್ತು ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸುವ ಮೂಲಕ ಸಹಪಠ್ಯ ಚಟುವಟಿಕೆಗಳಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ. ಈ ಎರಡು ವರ್ಷಗಳ ಸ್ನಾತಕೋತ್ತರ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಸೆರಾಮಿಕ್ ತಂತ್ರಜ್ಞಾನದಲ್ಲಿ ಮತ್ತಷ್ಟು ಪರಿಣತಿ ಪಡೆಯಲು, ಈ ಕ್ಷೇತ್ರದಲ್ಲಿ ಸುಧಾರಿತ ಜ್ಞಾನ ಮತ್ತು ಕೌಶಲ್ಯಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ. ಇದು ಸೆರಾಮಿಕ್ ವಸ್ತುಗಳು, ಸಂಸ್ಕರಣೆ ಮತ್ತು ಅನ್ವಯಿಕೆಗಳಲ್ಲಿ ಸುಧಾರಿತ ಜ್ಞಾನ ಮತ್ತು ವಿಶೇಷತೆಯನ್ನು ನೀಡುತ್ತದೆ.

1ನೇ ಪುಟದಿಂದ....

ಮೂಲಕ ಹಾದುಹೋಗಲು ಭಾರತೀಯ ನೌಕಾಪಡೆಯ ಸೂಚನೆಗಳಿಗಾಗಿ ಕಾಯುತ್ತಿವೆ. ಯುದ್ಧ ಪ್ರಾರಂಭವಾದ ಫೆಬ್ರವರಿ 28ರಿಂದ ಇಲ್ಲಿಯವರೆಗೆ, ನಾಲ್ಕು ಎಲ್‌ಪಿಜಿ ಮತ್ತು ಎರಡು ಕಚ್ಚಾ ತೈಲ ವಾಹಕಗಳು ಸೇ-ರಿದಂತೆ ಕನಿಷ್ಠ ಆರು ಭಾರತೀಯ ಧ್ವಜ ಹೊಂದಿರುವ ಟ್ಯಾಂಕರ್‌ಗಳು ಹಾರ್ಮುಜ್ ಜಲಸಂಧಿಯನ್ನು ದಾಟಿವೆ. ಇರಾನ್ ಯುದ್ಧದಿಂದಾಗಿ ಹಾರ್ಮುಜ್ ಜಲಸಂಧಿ ಬಹುತೇಕ ಮುಚ್ಚಲ್ಪಟ್ಟಿತ್ತು. ಇದರಿಂದ ಜಗತ್ತಿನ ಇಂಧನ ಪೂರೈಕೆಯ ಮೇಲೆ ತೀವ್ರ ಪರಿಣಾಮ ಬಿದ್ದಿತ್ತು. ಆದರೆ ಇರಾನ್ ಈಗ ತನ್ನ ಸ್ನೇಹಪರ ದೇಶಗಳಿಗೆ ಆಯ್ದ ಹಡಗುಗಳಿಗೆ ಅನುಮತಿ ನೀಡುತ್ತಿದೆ. ಹಡಗುಗಳು ಹಾದುಹೋಗುವ ಮೊದಲು ಸರಕು, ಸಿಬ್ಬಂದಿ ಮತ್ತು ಗಮ್ಯಸ್ಥಾನದ ಬಗ್ಗೆ ಸಂಪೂರ್ಣ ಮಾಹಿತಿ ನೀಡಬೇಕು. ಕ್ಲಿಯರೆನ್ಸ್ ಕೋಡ್ ಪಡೆದ ನಂತರವೇ ಸಾಗಣೆಗೆ ಅನುಮತಿ ನೀಡಲಾಗುತ್ತಿದೆ. ಪ್ರಸ್ತುತ ಸುಮಾರು 18 ರಿಂದ 20 ಭಾರತೀಯ ಹಡಗುಗಳು ಕೊಲ್ಲಿಯಲ್ಲಿ ಸಿಲುಕಿಕೊಂಡಿವೆ. ಇವುಗಳಲ್ಲಿ 677ಕ್ಕೂ ಹೆಚ್ಚು ಭಾರತೀಯ ಸಿಬ್ಬಂದಿ ಇದ್ದಾರೆ. ಯುಎಇ ಬಳಿ ಇನ್ನೂ ಐದಕ್ಕೂ ಹೆಚ್ಚು ಭಾರತೀಯ ಟ್ಯಾಂಕರ್ಗಳು ಅನುಮತಿಗಾಗಿ ಕಾಯುತ್ತಿವೆ. ಭಾರತೀಯ ಅಧಿಕಾರಿಗಳು ಹಡಗುಗಳ ಸುರಕ್ಷತೆಗೆ ತುಂಬಾ ಗಮನ ನೀಡುತ್ತಿದ್ದಾರೆ. ಸಿಬ್ಬಂದಿಯ ಆರೋಗ್ಯ ಮತ್ತು ಸುರಕ್ಷತೆಯನ್ನು ಖಚಿತಪಡಿಸಲಾಗುತ್ತಿದೆ. ಒಟ್ಟಾರೆಯಾಗಿ, ಹಾರ್ಮುಜ್ ಜಲಸಂಧಿಯಲ್ಲಿ ಭಾರತೀಯ ಹಡಗುಗಳಿಗೆ ಇರಾನ್ ಅನುಮತಿ ನೀಡಿರುವುದು ಇಂಧನ ಪೂರೈಕೆಗೆ ಸ್ವಲ್ಪ ರಿಲೀಫ್ ತಂದಿದೆ. ಆದರೆ ಯುದ್ಧದ ಪರಿಸ್ಥಿತಿ ಇನ್ನೂ ತೀವ್ರವಾಗಿರುವುದರಿಂದ ಭಾರತ ಸರ್ಕಾರ ಮತ್ತು ನೌಕಾಪಡೆ ಎಲ್ಲಾ ಹಡಗುಗಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

# ಕಚ್ಚಾ ತೈಲ ಹೊತ್ತು ಭಾರತಕ್ಕೆ ಬರುತ್ತಿರೋ ಹಡಗುಗಳಿಗೆ ನೌಕಾಪಡೆಯ ಭದ್ರತೆ

❑ ನೈಜ್ಯ ದೆಸೆ ನ್ಯೂಸ್

**ಕೊಲ್ಲಿ ಯುದ್ಧದ ಮಧ್ಯೆ ಭಾರತಕ್ಕೆ ಕಚ್ಚಾ ತೈಲ ಹೊತ್ತ ಮತ್ತೆರಡು ಹಡಗುಗಳು ಬರುತ್ತಿವೆ. ಎರಡೂ ಹಡಗುಗಳು ಹಾರ್ಮುಜ್ ಜಲಸಂಧಿ ದಾಟಿದ್ದು, ನೌಕಾಪಡೆಯ ಭದ್ರತೆಯಲ್ಲಿ ಭಾರತದತ್ತ ಆಗಮಿಸುತ್ತಿವೆ.**

ಕಳೆದ ಕೆಲವು ದಿನಗಳಿಂದ, ಹಾರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಸಂಚಾರ ಸೀಮಿತವಾಗಿದೆ. ಕೆಲವು ದೇಶದ ಹಡಗಗಳು ಅಲ್ಲೇ ಸ್ಥಗಿತಗೊಂಡಿವೆ. ಭಾರತಕ್ಕೆ ಬರುವ ಹಡಗುಗಳ ಸಂಚಾರಕ್ಕೆ ಅನುಮತಿ ದೊರೆತಿದೆ. ಇನ್ನೂ ಭಾರತದ ಹಡಗುಗಳ ಸುರಕ್ಷತೆಗಾಗಿ ಭಾರತೀಯ ನೌಕಪಡೆ ಯುದ್ಧ ನೌಕೆಗಳನ್ನು ನಿಯೋಜಿಸಿದೆ. ಕೊಲ್ಲಿ ಯುದ್ಧದ ನಡುವೆ ರಷ್ಯಾ ಶಾಕಿಂಗ್ ನ್ಯೂಸ್ ಕೊಟ್ಟಿದೆ. ಏಪ್ರಿಲ್ 1 ರಿಂದ ಕಚ್ಚಾ ತೈಲ ರಫ್ತು ಸ್ಥಗಿ-



ತಗೊಳಿಸಲು ರಷ್ಯಾ ಕಠಿಣ ನಿರ್ಧಾರ ಕೈಗೊಂಡಿದೆ. ಇದ್ರಿಂದ ಭಾರತದ ಇಂಧನ ಮಾರುಕಟ್ಟೆ ಮೇಲೆ ಕ-ರಿನೆರಳು ಬೀಳುವ ಆತಂಕ ಎದುರಾಗಿದೆ. ಯುದ್ಧದಿಂದ ಈಗಾಗಲೇ ಜಾಗತಿಕ ಮಟ್ಟದಲ್ಲಿ ತೈಲ, ಗ್ಯಾಸ್ ತಲ್ಲಣ ಶುರುವಾಗಿರೋ ಹೊತ್ತಲ್ಲೇ ರಷ್ಯಾ ಏಪ್ರಿಲ್ 1 ರಿಂದ ಜುಲೈ 31 ರವರೆಗೆ ಕಚ್ಚಾ ತೈಲ ರಫ್ತನ್ನು ಸ್ಥಗಿತಗೊಳಿಸಲು ಮುಂದಾಗಿದೆ.

ಈ ನಿರ್ಧಾರ ಅನ್ಯದೇಶಗಳ ನಿದ್ದೆಗೆಡಿಸಿದೆ. ಕಳೆದ ವರ್ಷ ರಷ್ಯಾದ ಕೆಲವು ಭಾಗಗಳಲ್ಲಿ ಹಾಗೂ ರಷ್ಯಾ ನಿಯಂತ್ರಣದಲ್ಲಿರುವ ಉಕ್ರೇನ್ ಪ್ರದೇಶಗಳಲ್ಲಿ ಗ್ಯಾಸೋಲಿನ್ ಕೊರತೆ ಉಂಟಾಗಿತ್ತು. ತೈಲ ಸಂಸ್ಕರಣಾಗಾರಗಳ ಮೇಲೆ ನಡೆದ ದಾಳಿ ಮತ್ತು ಹಠಾತ್ ಬೇಡಿಕೆಯ ಏರಿಕೆಯಿಂದ ಸಮಸ್ಯೆ ಉಂಟಾಗಿತ್ತು. ಈ ಬಾರಿ ಯಾವುದೇ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ರಫ್ತು ನಿಷೇಧ ಹೇರಲಾಗಿದೆ. 47 ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ ಜಗ್ ವಸಂತ್ ಹಡಗು ಮಾ.27 ರಂದು ಗುಜರಾತ್ ಬಂದರು ತಲುಪಿದೆ. ಇದರಿಂದ ದೇಶದಲ್ಲಿ ಉದ್ಭವಿಸಿರುವ ಗ್ಯಾಸ್ ಅಭಾವಕ್ಕೆ ಕೊಂಚ ರಿಲೀಫ್ ಸಿಗುವ ನಿರೀಕ್ಷೆ ಇದೆ.

# ಭಾರತಕ್ಕೆ ಬಂದಿಳಿದ ಎಲ್‌ಪಿಜಿ ಹೊತ್ತ ಹಡಗು

❑ ನೈಜ್ಯ ದೆಸೆ ನ್ಯೂಸ್

**ಹಾರ್ಮುಜ್ ಜಲಸಂಧಿಯಲ್ಲಿ ಕ್ಲಿಯರೆನ್ಸ್ ಪಡೆದ ಬಳಿಕ ಭಾರತೀಯ ಎಲ್‌ಪಿಜಿ ಟ್ಯಾಂಕರ್ ಹೊತ್ತ ಜಗ್ ವಸಂತ್ ಹಡಗು ಮತ್ತು ಪೈನ್ ಗ್ಯಾಸ್ ಹೊತ್ತ ಹಡಗು ಸುರಕ್ಷಿತವಾಗಿ ಭಾರತ ತಲುಪಿವೆ.**

ಇನ್ನೂ ಎರಡು ಹಡಗು ಮಾರ್ಗಮಧ್ಯದಲ್ಲಿದ್ದು, ಸುಮಾರು 20 ಹಡಗುಗಳು ಅನುಮತಿಗಾಗಿ ಕಾಯುತ್ತಾ ಹಾರ್ಮುಜ್ ಜಲಸಂಧಿಯಲ್ಲೇ ಸಿಲುಕಿಕೊಂಡಿವೆ. ಲಿಕ್ವಿಡ್ ಪೆಟ್ರೋಲಿಯಂ ಗ್ಯಾಸ್ ಸಾಗಿಸುತ್ತಿದ್ದ ಭಾರತದ ಧ್ವಜ ಹೊತ್ತ ಎರಡು ಟ್ಯಾಂಕರ್‌ಗಳು ಸುರಕ್ಷಿತವಾಗಿ ಇರಾನ್‌ನ ಹಾರ್ಮುಜ್ ಜಲಸಂಧಿ ದಾಟಿ ಭಾರತಕ್ಕೆ ಬಂದಿವೆ, ಇರಾನ್



ಅಧಿಕಾರಿಗಳು ಗೊತ್ತುಪಡಿಸಿದ ಮಾರ್ಗಗಳನ್ನೇ ಅನುಸರಿಸಿ 2 ಹಡಗು ಸುರಕ್ಷಿತವಾಗಿ ಪ್ರಯಾಣ ಬೆಳೆಸಿವೆ. ಜಗ್ ವಸಂತ್‌ನಲ್ಲಿದ್ದ 14 ಸಿಬ್ಬಂದಿ ಕೂಡ ಆರೋಗ್ಯವಾಗಿದ್ದಾರೆ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ. ಜಗ್ ವಸಂತ್ ಶುಕ್ರವಾರ ರಾತ್ರಿ 8 ಗಂಟೆ ಸುಮಾರಿಗೆ ದೀನದಯಾಳ್ ಬಂಧರು ಪ್ರಾಧಿಕಾರದ ಟರ್ಮಿನಲ್ ವಡಿನಾರ್‌ನಲ್ಲಿ ಲಂಗರು ಹಾಕಿತು. 230 ಮೀಟರ್ ಉದ್ದದ ಬೃಹತ್ ಹಡಗು 47,000 ಟನ್ ಎಲ್‌ಪಿಜಿ ಸಾಗಿಸುತ್ತಿತ್ತು. ಇದರ ಸರಕನ್ನು ಹೆಚ್ಚಿನ ಸಾಗಣೆಗಾಗಿ ಮತ್ತೊಂದು ಹಡಗಿಗೆ ವರ್ಗಾಯಿಸಲಾಗಿದೆ.

ಪೈನ್ ಗ್ಯಾಸ್ ಟ್ಯಾಂಕರ್ ಹೊತ್ತ 2ನೇ ಹಡಗು ಸಹ ಶುಕ್ರವಾರ ರಾತ್ರಿಯೇ ಭಾರತದ ಗಡಿ ತಲುಪಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನಿಂದ ಬಾಡಿಗೆಗೆ ಪಡೆಯಲಾದ ಈ ಹಡಗು ಏಪ್ರಿಲ್ 2 ರಂದು ಒಡಿಶಾದ ಧಮ್ರಾ ಬಂದರನ್ನು ಪ್ರವೇಶಿಸುವ ನಿರೀಕ್ಷೆಯಿದೆ. ಕಡಲ ಸಂರಕ್ಷಣಾ ಪಡೆಗಳ ಮಾಹಿತಿ ಪ್ರಕಾರ, ಭಾರತೀಯ ಧ್ವಜ ಹೊಂದಿರುವ ಇತರ 3 ಐಕಲು ಹಡಗುಗಳಾದ ಜಗ್ ವಿಕ್ರಮ್, ಗ್ರೀನ್ ಆಶಾ ಮತ್ತು ಗ್ರೀನ್ ಸಾನ್ವಿ ಮಿನಾ ಸಕ್ರ್ ಬಳಿ ಲಂಗರು ಹಾಕಿವೆ. ಜಲಸಂಧಿಯ ಮೂಲಕ ಹಾದುಹೋಗಲು ಭಾರತೀಯ ನೌಕಾಪಡೆಯಿಂದ ಸೂಚನೆಗಳಿಗಾಗಿ ಕಾಯುತ್ತಿವೆ ಎಂದು ತಿಳಿದುಬಂದಿದೆ.

ಕಳೆದ ಫೆಬ್ರವರಿ 28 ಎಂದು ಇರಾನ್ ಯುದ್ಧ ಪ್ರಾರಂಭವಾದಾಗಿನಿಂದ ಈವರೆಗೆ 4 ಮತ್ತು 2 ಕಚ್ಚಾ ತೈಲ ಟ್ಯಾಂಕರ್ಗಳು ಹಾರ್ಮುಜ್ ಜಲಸಂಧಿ ದಾಟಿ ಭಾರತ ಪ್ರವೇಶಿಸಿವೆ. ಇನ್ನೂ ಸುಮಾರು 18 ರಿಂದ 20 ಭಾರತೀಯ ಹಡಗುಗಳು ಕೊಲ್ಲಿಯಲ್ಲಿ ಸಿಲುಕಿಕೊಂಡಿವೆ, ಇದರಲ್ಲಿ 677 ಕ್ಕೂ ಹೆಚ್ಚು ಭಾರತೀಯ ಸಿಬ್ಬಂದಿ ಇದ್ದಾರೆ ಎಂದು ವರದಿಗಳು ತಿಳಿಸಿವೆ.

# 2.38 ಲಕ್ಷ ಕೋಟಿ ರಕ್ಷಣಾ ಒಪ್ಪಂದಕ್ಕೆ ಕೇಂದ್ರ ಅಸ್ತು

❑ ನೈಜ್ಯ ದೆಸೆ ನ್ಯೂಸ್

**ದೇಶದ ರಕ್ಷಣಾ ಸಾಮರ್ಥ್ಯ ಬಲಪಡಿಸುವ ನಿಟ್ಟಿನಲ್ಲಿ ಎಸ್-400 ಮತ್ತು ಸು-30 ಎಂಜಿನ್‌ಗಳ ಸೇರಿದಂತೆ ರೂ. 2.38 ಲಕ್ಷ ಕೋಟಿ ರೂ. ರಕ್ಷಣಾ ಒಪ್ಪಂದಗಳಿಗೆ ಕೇಂದ್ರ ಸರ್ಕಾರದ ಅಧೀನದಲ್ಲಿರುವ ರಕ್ಷಣಾ ಸ್ವಾಧೀನ ಮಂಡಳಿ ಅನುಮೋದನೆ ನೀಡಿದೆ.**

ಎಸ್-400 ದೀರ್ಘ ಶ್ರೇಣಿಯ ಕ್ಷಿಪಣಿ ಮೇಲ್ಮೈಯಿಂದ ಗಾಳಿಗೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆಯ ಹೆಚ್ಚಿನ ಘಟಕಗಳನ್ನು ಖರೀದಿಸುವುದು ಮತ್ತು ಸುಖೋಯ್ ಸಿ-30 ಏರೋ ಎಂಜಿನ್ ಖರೀದಿಗೆ ಒತ್ತು ನೀಡಲಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಭಾರತೀಯ ಸಶಸ್ತ್ರ ಪಡೆಗಳನ್ನು ಆಧುನೀಕರಿಸುವ ಉದ್ದೇಶದಿಂದ ರಕ್ಷಣಾ ಸ್ವಾಧೀನ ಮಂಡಳಿ. 2.38 ಲಕ್ಷ ಕೋಟಿ ಮೌಲ್ಯದ ಪ್ರಸ್ತಾವನೆಗಳನ್ನು ಅನುಮೋದನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಭಾರತೀಯ ವಾಯುಪಡೆಗೆ ಎಸ್- -400 ದೀರ್ಘ ಶ್ರೇಣಿಯ ಮೇಲ್ಮೈಯಿಂದ ಗಾಳಿಗೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆ ಖರೀದಿಸಲು, ಸುಖೋಯ್ ಸು-30 ಏರೋ ಎಂಜಿನ್ ಖರೀದಿಗೂ ಒತ್ತು ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಜೊತೆಗೆ ಮಧ್ಯಮ ಸಾರಿಗೆ ವಿಮಾನ ಖರೀದಿಸಲು ಸಮ್ಮತಿ ನೀಡಿದೆ. ಕಾರ್ಯತಂತ್ರದ, ಯುದ್ಧತಂತ್ರದ ಮತ್ತು ಕಾರ್ಯಾಚರಣೆಯ ಏರ್ಲಿಫ್ಟ್" ಅವಶ್ಯಕತೆಗಳನ್ನು ಪೂರೈಸುವ ಗುರಿ ಹೊಂದಿದೆ.

ಎಸ್-400 ವ್ಯವಸ್ಥೆಯು ಪ್ರಮುಖ ಪ್ರದೇಶ ಗುರಿಯಾಗಿಸಿಕೊಂಡು ಶತ್ರುಗಳ



ದೀರ್ಘ-ಶ್ರೇಣಿಯ ವಾಯು ವಾಹಕ ಎದು-ರಿಸುತ್ತದೆ, ಆದ-'ರೆ ರಿಮೋಟ್ಲಿ ಪೈಲಟ್ ಮಾಡಿದ ಸ್ಟ್ರೈಕ್ ಏರ್ಕ್ರಾಫ್ಟ್ ಆಕ್ರಮಣಕಾರಿ ಕೌಂಟರ್ ಮತ್ತು ಸಂಘಟಿತ ವಾಯು ಕಾರ್ಯಾಚರಣೆ ಕೈಗೊಳ್ಳಲು ಅನುವು ಮಾಡಿಕೊಡುತ್ತದೆ, ಜೊತೆಗೆ ರಹಸ್ಯ ಗುಪ್ತಚರ, ಕಣ್ಗಾವಲು ಮತ್ತು ಗುರುತಿಸುವಿಕೆ ಚಟುವಟಿಕೆಗಳನ್ನು ಒದಗಿಸುತ್ತದೆ" ಎಂದು ಮೂಲಗಳು ತಿಳಿಸಿವೆ.

ಸು-30 ಏರೋ ಎಂಜಿನ್ ಮತ್ತು ಅದರ ಸಮುಚ್ಚಯಗಳ ಕೂಲಂಕುಶ ಪರೀಕ್ಷೆಯು ವಿಮಾನದ ಸೇವಾ ಜೀವನ ಹೆಚ್ಚಿಸುತ್ತದೆ ಮತ್ತು ವಾಯುಪಡೆಯ ಕಾರ್ಯಾಚರಣೆ ಅಗತ್ಯವನ್ನು ಪೂರೈಸುತ್ತದೆ" ಎಂದು ಮಾಹಿತಿ ನೀಡಲಾಗಿದೆ ಭಾರತೀಯ ಸೇನೆ, ಭಾರತೀಯ ಕರಾವಳಿ ಕಾವಲು ಪಡೆಯಿಗಾಗಿ ಆಂಅಯ ಅನುಮೋದನೆ ಭಾರತೀಯ ಸೇನೆಗಾಗಿ, ವಾಯು ರಕ್ಷಣಾ ಟ್ರ್ಯಾಕ್ ಮಾಡಲಾದ ವ್ಯವಸ್ಥೆ, ಶಸ್ತ್ರಸಜ್ಜಿತ ಚುಚ್ಚುವ ಟ್ಯಾಂಕ್ ಮದ್ದುಗುಂಡುಗಳು, ಹೆಚ್ಚಿನ ಸಾಮರ್ಥ್ಯದ ರೇಡಿಯೋ ರಿಲೇ, ಧನುಷ್ ಗನ್ ವ್ಯವಸ್ಥೆ ಮತ್ತು ರನ್‌ವೇ ಸ್ವತಂತ್ರ ವೈಮಾನಿಕ ಕಣ್ಗಾವಲು ವ್ಯವಸ್ಥೆಯನ್ನು ಖರೀದಿಸಲು ಕೂಡ ಅನುಮೋದನೆ ನೀಡಿದೆ

# ತಮಲೇಹಳ್ಳಿಯಲ್ಲಿ ಅದ್ದೂರಿ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ

❑ ನೈಜ್ಯ ದೆಸೆ ನ್ಯೂಸ್

**ತಾಲೂಕಿನ ತಮಲೇಹಳ್ಳಿ ಗ್ರಾಮ ದಲ್ಲಿ ಸಾವಿರಾರು ಭಕ್ತರ ನಡುವೆ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಭಾನುವಾರ ವಿಜೃಂಭಣೆಯಿಂದ ನೆರವೇರಿತು.**

ವಿವಿಧ ಬಣ್ಣಗಳ ಸುಗಂಧಿತ ಹೂ ಮಾಲೆಗಳಿಂದ ಸಿಂಗರಿಸಲಾ ಪಟ್ಟಿದ್ದ ರಥಕ್ಕೆ ಬೆಳಗಿನ ಜಾವಾ ಕುಂಭವನ್ನು ಹೊತ್ತು ತಂದ ಭಕ್ತರು ರಥದ ಸುತ್ತಲೂ ಪ್ರದಕ್ಷಣೆ ಹಾಕಿ ವಿಶೇಷ ಪೂಜೆ ಸಲ್ಲಿಸಿ ದರು. ನಂತರ ದೇವಸ್ಥಾನದಿಂದ ದೇವರ ಉತ್ಸವ ಮೂರ್ತಿ ಯನ್ನು ರಥದಲ್ಲಿಟ್ಟು ಅದ್ದೂರಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.



ರಥದ ಹಗ್ಗವನ್ನು ಹಿಡಿದ ಯುವ ಪಡೆ ಮಹಾತ್ಮ ಆಂಜನೇಯ ಮಹಾರಾಜ್ ಕೀ ಜೈ ಎಂದು ಘೋಷಣೆ ಕೂಗುತ್ತ ಹೆಜ್ಜೆ ಹಾಕಿ ದರು. ಪಾದಗಟ್ಟೆಯನ್ನು ತಲುಪಿದ ರಥಕ್ಕೆ ವಿಶೇಷ ಪೂಜೆ ಸಲ್ಲಿಸಿ, ಮತ್ತೆ ವಾಪಸ್ ಬಂದು ಮೂಲಸ್ಥಾನಕ್ಕೆ ತಂದು ನಿಲ್ಲಿಸಲಾಯಿತು. ರಥೋತ್ಸವದುದ್ದಕ್ಕೂ ಬಾಜಾ ಭಜಂತ್ರಿಗಳ ಜತೆಗೆ ಪಟಾಕಿಗಳ ಸದ್ದು ಮುಗಿಲು ಮುಟ್ಟಿತು. ಪ್ರತಿ ವರ್ಷ ಯುಗಾದಿ ಹಬ್ಬದ ತರುವ ನಡುವೆಯುವ ಆಂಜನೇಯಸ್ವಾಮಿ ರಥ-'ೋತ್ಸವ ವಿವಿಧ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿ ಸ್ವಾಮಿ ದರ್ಶನ ಪಡೆದು ಪುನಿತರಾದರು. ರಥೋತ್ಸವಕ್ಕೂ ಮುನ್ನ ನಡೆದ ಸ್ವಾಮಿ ಮುಕ್ತಿಪಟವನ್ನು ತಮಲೇಹಳ್ಳಿ ಗ್ರಾಮದ ಕೋಳಿ ವ್ಯಾಪಾರಿ ಗುರುಮೂರ್ತಿ ಅವರು 100101 ಲಕ್ಷ ರೂಗಳಿಗೆ ತಮ್ಮದಾಗಿಸಿಕೊಂಡರು.

# ಉಪ ಚುನಾವಣೆಯಲ್ಲಿ ಸೋಲಿಸಿದರೆ ರಾಜ್ಯದಲ್ಲಿ ಕಾಂಗ್ರೆಸ್ ಧೂಳಿಪಟವಾಗಲಿದೆ : ಬೊಮ್ಮಾಯಿ

❑ ನೈಜ್ಯ ದೆಸೆ ನ್ಯೂಸ್

**ಬಾಗಲಕೋಟೆ: ಉಪ ಚುನಾವಣೆಯಲ್ಲಿ ಸೋಲಿಸಿದರೆ ಮುಂದಿನ ಎರಡು ವರ್ಷದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಧೂಳಿಪಟವಾಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಭವಿಷ್ಯ ನುಡಿದರು.**

ಬೇವೂರು ಗ್ರಾಮದಲ್ಲಿ ವೀರಣ್ಣ ಚರಂತಿಮಠ ಅವರ ಪರವಾಗಿ ಮತಯಾಚನೆ ಮಾಡಿ ಮಾತನಾಡಿದ ಅವರು, ಈ ಉಪಚುನಾವಣೆ ಸದವಕಾಶವಾಗಿದೆ. 2023 ರಲ್ಲಿ ಕಾಂಗ್ರೆಸ್ ನವರು ಸುಳ್ಳು ಆಶ್ವಾಸನೆ ಕೊಟ್ಟು ಜನರ ಭಾವನೆಗಳನ್ನು ದುರುಪಯೋಗ ಮಾಡಿಕೊಂಡು ಅಧಿಕಾರಕ್ಕೆ ಬಂದಿದ್ದರು. ಈಗ ಮೂರು ವರ್ಷದಲ್ಲಿ ತಾವೆಲ್ಲ ನೋಡಿದ್ದೀರಿ ಬಾಗಲಕೋಟೆಯ ಗ್ರಾಮೀಣ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಆಗಿಲ್ಲ. ಸಿಎಂ ನಂಬಿಕೊಂಡಿರುವ ಅಹಿಂದ ಜನರೇ ಭ್ರಮನಿರಸನ ಗೊಂಡಿದ್ದಾರೆ ಎಂದರು.

ಎಲ್ಲಾ ಎಸ್‌ಟಿ ಜನಾಂಗಕ್ಕೆ ನಮ್ಮ ಕಾಲದಲ್ಲಿ ಗಂಗಾ ಕಲ್ಯಾಣ ಯೋಜನೆ ಕೊಡುತ್ತಿದ್ದೆವು. ಪ್ರವಾಹ ಸಂದರ್ಭದಲ್ಲಿ ಮನೆ ಕಳೆದುಕೊಂಡವರಿಗೆ 5 ಲಕ್ಷ



ರೂ. ಕೊಡುತ್ತಿದ್ದೆವು. ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುತ್ತಿದ್ದೆವು. ಈ ಕಾಂಗ್ರೆಸ್ ಸರ್ಕಾರ ಎಲ್ಲವನ್ನೂ ನಿಲ್ಲಿಸಿದೆ ಎಂದು ಕಿಡಿಕಾರಿದರು. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕೂಡಲ ಸಂಗಮ ಮುಳುಗಿದೆ. ಈಗ ಎರಡನೇ ಹಂತದಲ್ಲಿ ಬಹಳಷ್ಟು ಜಮೀನು ಮುಳುಗಲಿದೆ. ನಾನು ಸಿಎಂ ಆಗಿದ್ದಾಗ 4 ಸಾವಿರ ಕೋಟಿ ಮೀಸಲಿಟ್ಟು ಪರಿಹಾರ ಕೊಡಲು ಮುಂದಾಗಿದ್ದೆ, ಅದನ್ನು ಕಾಂಗ್ರೆಸ್ ನವರು ವಿರೋಧಿಸಿದ್ದರು. ಈಗ ಚುನಾವಣೆ ಬಂದಿದೆ ಎಂದು ಕಾಂಗ್ರೆಸ್‌ವರು ಪರಿಹಾರ ಕೊಡುತ್ತಿದ್ದಾರೆ. ಇಲ್ಲಿ 1 ಲಕ್ಷ 30 ಸಾವಿರ ಕೋಟಿ ರೂ. ಪರಿಹಾರ ಕೊಡಬೇಕು. 75 ಸಾವಿರ ಕೋಟಿ ರೂ. ಜಮೀನು ಕಳೆದುಕೊಂಡವರಿಗೆ ಕೊಡಬೇಕು. ಅವರೇ ಒಂದು ಆದೇಶ ಮಾಡಿ ಒಣ ಬೇಸಾಯದ ಜಮೀನಿಗೆ ಇಷ್ಟು, ನೀರಾವರಿಗೆ ಇಷ್ಟು ಎಂದು ಪ್ರತಿ ವರ್ಷ 18 ಸಾವಿರ ಕೋಟಿ ಕೊಡುತ್ತೇನೆ ಎಂದು ಹೇಳಿ ಆದೇಶ ಮಾಡಿ, ಈಗ ಬಜೆಟ್ ನಲ್ಲಿ 3 ಸಾವಿರ ಕೋಟಿ ಮಾತ್ರ ಮೀಸಲಿಟ್ಟಿದ್ದಾರೆ. ಅದನ್ನೂ ಕೂಡ ಪೂರ್ಣ ಖರ್ಚು ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

**ಕಾಂಗ್ರೆಸ್‌ನಿಂದ ಮೋಸ :** ಜನರು ಜಮೀನು ಮನೆ ಮತ್ತೆ ಕಳೆದುಕೊಂಡವರ ಪರಿಸ್ಥಿತಿ ಗಂಭೀರ ಇದೆ. ಕಾಂಗ್ರೆಸ್ ಈ ಭಾಗದ ಬಡವರ ಎಸಿ ಎಸ್ಪಿ ಸಮುದಾಯದ ಜನರಿಗೆ ಮೋಸ ಮಾಡುತ್ತಿದೆ. ಇದು ಮುಂಬರುವ ಎರಡು ವರ್ಷದಲ್ಲಿ ಕಾಂಗ್ರೆಸನ್ನು ಕಟ್ಟಿ ಹಾಕಬೇಕೆನ್ನುವ ದಿಕ್ಸೂಚಿ ಚುನಾವಣೆ, ಈ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಸಿದರೆ ಮುಂದಿನ ಎರಡು ವರ್ಷದಲ್ಲಿ ಕಾಂಗ್ರೆಸ್ ಧೂಳಿಪಟವಾಗುತ್ತದೆ. ಸಿದ್ದರಾಮಯ್ಯ ಅವರನ್ನು ಮೈಸೂರಿನ ಜನ ಕೈ ಬಿಟ್ಟಾಗ ಉತ್ತರ ಕರ್ನಾಟಕದ ಬಾದಾಮಿಯ ಜನರು ಕೈ ಹಿಡಿದಿದ್ದರು. ಅವರನ್ನು ಬಿಟ್ಟು ಮತ್ತೆ ಮೈಸೂರಿಗೆ ಹೋದರು. ಜನರು ಮರ್ಯಾದೆ ಕೊಡುತ್ತಾರೆ ಎಂದು ದುರುಪಯೋಗ ಪಡೆಸಿಕೊಂಡಿದ್ದಾರೆ. ಅದಕ್ಕೆ ಈಗ ಅವರಿಗೆ ಪಾಠ ಕಲಿಸುವ ಸಂದರ್ಭ ಬಂದಿದೆ ಎಂದರು.

ಈಗ ಬಾಗಲಕೋಟೆ ಉಪ ಚುನಾವಣೆಯಲ್ಲಿ ವೀರಣ್ಣ ಚರಂತಿಮಠ ಅವರು ನಿಂತಿದ್ದಾರೆ. ಅವರು ನೇರ ನುಡಿಯ ನಾಯಕ, ಸತ್ಯವನ್ನೇ ನುಡಿಯುವ ವ್ಯಕ್ತಿ ಏನಾದರೂ ಕೆಲಸ ಹಿಡಿದರೆ ಬಿಡುವುದಿಲ್ಲ. ನವನಗರಕ್ಕೆ 700 ಕೋಟಿ ರೂ. ಬೇಕೆಂದು ಪಟ್ಟು ಹಿಡಿದು ತಂದು ಕೆಲಸ ಮಾಡಿಸಿದರು. ಅವರದು ಸಾವಿರಾರು ಕೋಟಿ ವ್ಯವಹಾರ ನಡೆಯುವ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಇದೆ. ಅದರಿಂದ ಒಂದು ರೂಪಾಯಿಯನ್ನೂ ಪಡೆದಿಲ್ಲ. ಸಾರ್ವಜನಿಕ-ರಿಂದಲೂ ಯಾವುದೇ ಹಣ ಪಡೆದಿಲ್ಲ. ಈಗ ರಾಜ್ಯದಲ್ಲಿ ಶೇ 60 ರಷ್ಟು ಭ್ರಷ್ಟಾಚಾರ ಇದೆ. ಹೀಗಾಗಿ ಮತ್ತೊಮ್ಮೆ ವೀರಣ್ಣ ಚರಂತಿಮಠ ಅವರನ್ನು ಗೆಲ್ಲಿಸಿ, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸನ್ನು ಧೂಳಿಪಟ ಮಾಡಬೇಕು. ಅದಕ್ಕಾಗಿ ಮನೆ ಮನೆಗೆ ತೆರಳಿ ಕಮಲಕ್ಕೆ ಮತ ಹಾಕುವಂತೆ ಜನರಿಗೆ ತಿಳಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಸದರಾದ ಗೋವಿಂದ ಕಾರಜೋಳ, ಬಾಗಲಕೋಟೆ ಗ್ರಾಮೀಣ ಮಂಡಳದ ಅಧ್ಯಕ್ಷರಾದ ಸುರೇಶ ಕೊಣ್ಣೂರ, ಮುಖಂಡರುಗಳಾದ ರಾಜಶೇಖರ ಮುದೇನೂರ, ಡಾ ಶರಣಬಸಪ್ಪ ಯತ್ನಳ್ಳಿ, ಬಸವರಾಜ ಪರ್ವತಿಮಠ, ಕಲ್ಲಪ್ಪ ಕೊಡಬಾಗಿ, ಶೇಖರಪ್ಪ ಹೆರಕಲ್ಲ ಸೇರಿದಂತೆ ಹಲವಾರು ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101